ಈ ವಾಹನಗಳ ಖರೀದಿಗೆ ತಗಲುವ ಅಂದಾಜು ವೆಚ್ಚ ರೂ.15.00 ಲಕ್ಷಗಳನ್ನು 2010–11ನೇ ಸಾಲಿಗೆ "ಲೆಕ್ಕ ಶೀರ್ಷಿಕೆ 2702–80–052–01–221 (ಯೋಜನೇತರ) ಸಾಮಗ್ರಿ ಮತ್ತು ಸರಬರಾಜು" ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ 47 ಆಕೋ–1/11, ದಿನಾಂಕ 21–03–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಪಿ.ಆರ್. 959

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಕೊಡಗನೂರು ಕೆರೆ ಏರಿ ದುರಸ್ಥಿ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಸನೀಇ 01 ಕೆಜಿದು (ತಾಂ) 2010, ದಿನಾಂಕ 26–03–2010.

2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ರವರ ಪತ್ರದ ಸಂಖ್ಯೆ : ಮುಸದ/ತಾಂ–4/ಸ.ಇಂ.10/ಚಿತ್ರದುರ್ಗ/ದಾವಣಗೆರೆ ಜಿ/ಇ–ಟೆಂಡರ್/2011/1346, ದಿನಾಂಕ 11–03–2011.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 4702 ಶೀರ್ಷಿಕೆ ಅಡಿ ರೂ.266.00 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ಬೆಂಗಳೂರುರವರ ನೋಂದಣಿ ಸಿ.ಇ.ಆರ್. ಸಂಖ್ಯೆ 119/2010–11 ದಿನಾಂಕ 02–11–2010 ರಲ್ಲಿ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಚಿತ್ರದುರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	06–12–2010
ದಾವಣಗೆರೆ ಜಿಲ್ಲಾ ಟೆಂಡರ್ ಬುಲೆಟಿನ್	04–12–2010
ಪ್ರಜಾವಾಣಿ ದಿನ ಪತ್ರಿಕೆ	24–11–2010
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	25–11–2010

ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ದಿನಾಂಕ 13–01–2011 ರಂದು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂವರು ಗುತ್ತಿಗೆದಾರರು ಭಾಗವಹಿಸಿದ್ದು ಹಾಗೂ ಇಬ್ಬರು ಮಾತ್ರ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್ ಅನ್ನು 02–02–2011 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 2,49,45,831/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪರಿಷ್ಕೃತ ದರಗಳ ಮೇಲೆ ಶೇಕಡಾವಾರು ಹೆಚ್ಚಳ/ಕಡಿಮೆ
1	ಕೆ. ಶ್ರೀನಿವಾಸ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು	2,82,99,168/–	13.44 ಹೆಚ್ಚು
2	ಜಿ.ಓ. ರಾಜು, 1ನೇ ದರ್ಜೆ ಗುತ್ತಿಗೆದಾರರು	2,84,27,767/–	13.96 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ. ಶ್ರೀನಿವಾಸ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಕಡಿಮೆ ದರ ನೀಡಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.44 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ 16–03–2011 ರಂದು ಪತ್ರವನ್ನು ನೀಡಿ ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇಕಡ 7.00 ರಷ್ಟು ಹೆಚ್ಚಿನ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ತಿಳಿಸಿರುತ್ತಾರೆ. ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಪರಿಷ್ಕೃತ ಮೊತ್ತ ರೂ. 2,49,45,831/– ಗಳ ಮೇಲೆ ಶೇ. 6.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,64,42,581/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ಕೆಜಿದು (ತಾಂತ್ರಿಕ) 2011, ಬೆಂಗಳೂರು, ದಿನಾಂಕ 30ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಕೊಡಗನೂರು ಕೆರೆ ಏರಿ ದುರಸ್ಥಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಪರಿಷ್ಕೃತ ಮೊತ್ತ ರೂ. 2,49,45,831/– ಗಳ ಮೇಲೆ ಶೇ. 6.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,64,42,581/– ಗಳಿಗೆ (ರೂ. ಎರಡು ಕೋಟಿ ಅರವತ್ತನಾಲ್ಕು ಲಕ್ಷ ನಲವತ್ತೆರಡು ಸಾವಿರದ ಐದನೂರ ಎಂಬತ್ತೊಂದು) ಕಾಮಗಾರಿಯನ್ನು ಶ್ರೀ ಕೆ. ಶ್ರೀನಿವಾಸ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ,
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 960

ಜಲಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸನೀಇ 240 ಮಸಾವಿ 2010, ಬೆಂಗಳೂರು, ದಿನಾಂಕ 29–03–2011

ಸರ್ಕಾರದ ಆದೇಶ ಸಂಖ್ಯೆ : ಸನೀಇ 240 ಮಸಾವಿ 2010, ದಿನಾಂಕ 23–03–2011 ರ ಆದೇಶ ಭಾಗದಲ್ಲಿ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

1. ಉತ್ತರ ವಲಯ ಎಂಬ ಪದವನ್ನು ರದ್ದುಪಡಿಸಿದೆ.
2. 7 ವಾಹನಗಳ ಬದಲಾಗಿ 3 ವಾಹನಗಳು.
3. ರೂ. 30.55 ಲಕ್ಷಗಳ ಬದಲಾಗಿ ರೂ. 15.55 ಲಕ್ಷಗಳು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋಪಾಲ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 961

ಜಲಸಂಪನ್ಮೂಲ ಸಚಿವಾಲಯ

ವಿಷಯ : ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ ತುರುಕನಕಟ್ಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : ಮುಸದ/ಲೆಶಾಖೆ/ಲೆಸ–1/ಭೂಸ್ವಾಧೀನ/10–11/356, ದಿನಾಂಕ 21–02–2011.

2. ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಕಂಇ 08 ಭೂಸ್ವಾಮ್ಯೆ 2011, ದಿನಾಂಕ 25–02–2011.

ಪ್ರಸ್ತಾವನೆ :

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ ತುರುಕನಕಟ್ಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ದೈತ್ಯನಕೆರೆ ಕಾವಲ್ ಗ್ರಾಮದ ಸ.ನಂ. 1/17–20ರ ಒಟ್ಟು 7–19 ಎಕರೆ ಜಮೀನಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಪರಿಹಾರ ಪಾವತಿಸಲು ರೂ.13,10,048–00 ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 21-12-1995 ರಂದು ಹೊರಡಿಸಿದೆ. ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಉಪ ವಿಭಾಗಾಧಿಕಾರಿ, ಹುಣಸೂರು ಉಪ ವಿಭಾಗ, ಹುಣಸೂರು ಇವರು ದಿನಾಂಕ 28-07-1993 ರಂದು ರಚಿಸಿರುವ ಐತೀರ್ಪಿನಲ್ಲಿ ಪ್ರತಿ ಎಕರೆ ಜಮೀನಿಗೆ ರೂ.50,000/- ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಹುಣಸೂರು ಇಲ್ಲಿ ಸಲ್ಲಿಸಿದ್ದ ಎಲ್.ಎ.ಸಿ. ಸಂಖ್ಯೆ : 435/98 ನ್ನು ದಿನಾಂಕ 18-10-06 ರಂದು ವಜಾ ಮಾಡಿದೆ. ಈ ಆದೇಶದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಎಂ.ಎಫ್.ಎ. ಸಂಖ್ಯೆ 1856/07 ರಲ್ಲಿ ನ್ಯಾಯಾಲಯವು ದಿನಾಂಕ 30-10-09 ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆ ತರಿ ಜಮೀನಿಗೆ ರೂ.1.00 ಲಕ್ಷ ಮತ್ತು ಖುಷ್ಕಿ ಜಮೀನಿಗೆ ರೂ.75,000/- ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಿದೆ.

ಪ್ರಸ್ತುತ ಈ ಕೆರೆ ಕಾವೇರಿ ನೀರಾವರಿ ನಿಗಮದ ಉಸ್ತುವಾರಿಯಲ್ಲಿದ್ದು, ನ್ಯಾಯಾಲಯದ ಆದೇಶದಂತೆ ಹಣ ಬಿಡುಗಡೆಯಾಗದ ಕಾರಣ ಕಂದಾಯ ಇಲಾಖೆಯ ಅಧಿಕಾರಿಗಳ ಕಛೇರಿಗಳನ್ನು ಜಪ್ತಿಗೆ ವಾರೆಂಟ್ ಹೊರಡಿಸುವ ಪರಿಸ್ಥಿತಿ ಉಂಟಾಗಿರುವುದರಿಂದ, ನ್ಯಾಯಾಲಯದ ಆದೇಶದಂತೆ ರೂ.13,10,048-00 ಗಳನ್ನು ಜರೂರಾಗಿ ಬಿಡುಗಡೆ ಮಾಡುವಂತೆ ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ 25-02-11 ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದೆ.

ಮುಖ್ಯ ಇಂಜಿನಿಯರ್ ಮತ್ತು ಕಂದಾಯ ಇಲಾಖೆಯ ಕೋರಿಕೆಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 16 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ 29ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ ತುರುಕನಕಟ್ಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ದೈತ್ಯನಕೆರೆ ಕಾವಲ್ ಗ್ರಾಮದ ಸ.ನಂ. 1/17-20ರ ಒಟ್ಟು 7-19 ಎಕರೆ ಜಮೀನಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಮೊತ್ತ ರೂ.13,10,048-00 ಗಳನ್ನು (ಹದಿಮೂರು ಲಕ್ಷದ ಹತ್ತು ಸಾವಿರದ ನಲವತ್ತೆಂಟು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಲೋಇ 105 ಆಕೋ-1/11, ದಿನಾಂಕ 10-03-11 ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಪೂರಕ ಅನುದಾನ-III ರಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 962

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಗೊಡಚಿ ಗ್ರಾಮದ ಹದ್ದಿಯಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಬೆಳೆ ನಷ್ಟ ಪರಿಹಾರ ನೀಡುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ/2010-11/5169, ದಿನಾಂಕ 14-09-2010.
2. ಉಪ ವಿಭಾಗಾಧಿಕಾರಿಗಳು, ಬೈಲಹೊಂಗಲ ಇವರ ಆದೇಶ ಸಂಖ್ಯೆ : ಭೂಸ್ವಾ.ವಿವಹಿ.ರಾ 85/99-2000, ದಿನಾಂಕ 07-07-2010.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಗೊಡಚಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಗೊಡಚಿ ಗ್ರಾಮದ ಸರ್ವೆ ನಂಬರ್ 68/3ರ 3-33 ಎಕರೆ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು, ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 05-07-01 ರಂದು ಮತ್ತು ಪರಿಹಾರ ಧನದ ಐತೀರ್ಪನ್ನು ದಿನಾಂಕ 24-09-03 ರಂದು ಹೊರಡಿಸಲಾಗಿದೆ. ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಸವದತ್ತಿ ಇಲ್ಲಿ ಸಲ್ಲಿಸಿದ ಎಲ್.ಎ.ಸಿ. ಸಂಖ್ಯೆ 1/01 ಮತ್ತು 2/04 ರಲ್ಲಿ ನ್ಯಾಯಾಲಯವು ಹೆಚ್ಚಿನ ಪರಿಹಾರ ನಿಗದಿಪಡಿಸಿದೆ. ಈ ತೀರ್ಪಿನಂತೆ ಕಬ್ಜೆ ದಿನಾಂಕದಿಂದ 4(1) ರ ಅಧಿಸೂಚನೆ ದಿನಾಂಕದವರೆಗೆ ಬೆಳೆ ಹಾಕಿ ಪರಿಹಾರ ಮೊತ್ತ ರೂ.1,28,362.00 ಮತ್ತು ರೂ.3,,62,624.00 ಒಟ್ಟು ರೂ. 4,90,986.00 ಗಳನ್ನು ಪಾವತಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ 14-09-2010ರ ಪತ್ರದಲ್ಲಿ ಕೋರಿದ್ದಾರೆ.

ಎಲ್.ಎ.ಸಿ. ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಸ್ವಾಧೀನಕ್ಕೊಳಪಟ್ಟ ಜಮೀನುಗಳನ್ನು 1984ನೇ ಸಾಲಿನಲ್ಲಿ ಕಬ್ಜೆ ಪಡೆದಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಉಪ ವಿಭಾಗ, ಗೋಕಾಕ್ ಇವರು ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸಿದ್ದರು. ಇದನ್ನು ಆಧರಿಸಿ ಜಮೀನಿನ ಕಬ್ಜೆ ದಿನಾಂಕದಿಂದ 4(1)ರ ಅಧಿಸೂಚನೆ ದಿನಾಂಕದವರೆಗೆ ಬೆಳೆನಷ್ಟ ಪರಿಹಾರ ಪಾವತಿಸಲು ಭೂಮಾಲೀಕರು ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿ, ಉಪ ವಿಭಾಗಾಧಿಕಾರಿ, ಬೈಲಹೊಂಗಲ ಇವರು ರೂ.4,90,986–00 ಗಳ ನಷ್ಟ ಪರಿಹಾರಕ್ಕೆ ಮೇಲೆ (2)ರಲ್ಲಿ ಓದಲಾದ ದಿನಾಂಕ 07–07–10 ರಲ್ಲಿ ಆದೇಶ ಹೊರಡಿಸಿದ್ದಾರೆ. ಈ ಆದೇಶದಂತೆ ಭೂಮಾಲೀಕರಿಗೆ ಬೆಳೆ ನಷ್ಟ ಪರಿಹಾರ ಪಾವತಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರು ಹಣ ಬಿಡುಗಡೆ ಮಾಡುವಂತೆ ಮೇಲೆ (2) ರಲ್ಲಿ ಓದಲಾದ ದಿನಾಂಕ 14–09–10 ರ ಪತ್ರದಲ್ಲಿ ಕೋರಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 135 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 25ನೇ ಮಾರ್ಚ್ 2011

ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಗೊಡಚಿ ಗ್ರಾಮದ ಹದ್ದಿಯಲ್ಲಿ ನಿರ್ಮಿಸಲಾದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ನಾಗನೂರು ಗ್ರಾಮದ ಸ.ನಂ. 68/3ರ 3–33 ಎಕರೆ ಜಮೀನಿಗೆ ಉಪವಿಭಾಗಾಧಿಕಾರಿ, ಬೈಲಹೊಂಗಲ ಇವರು ರಚಿಸಿರುವ ಐತೀರ್ಪಿನಂತೆ ಕಬ್ಜೆ ದಿನಾಂಕದಿಂದ 4(1)ರ ಅಧಿಸೂಚನೆ ದಿನಾಂಕದವರೆಗೆ ಬೆಳೆನಷ್ಟ ಪರಿಹಾರ ಪಾವತಿಸಲು ಐತೀರ್ಪಿನಂತೆ ರೂ.4,90,986.00 ಗಳನ್ನು (ನಾಲ್ಕು ಲಕ್ಷದ ತೊಂಭತ್ತು ಸಾವಿರದ ಒಂಬೈನೂರ ಎಂಭತ್ತಾರು ರೂ.ಗಳು ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 01 ಬಿಎಸ್‌ಜಿ 2011, ದಿನಾಂಕ 19–03–2011 ರಲ್ಲಿ ಒದಗಿಸಿರುವ ಪೂರಕ ಅನುದಾನ–III ರಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಪಿ.ಆರ್. 963

ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, (ಉತ್ತರ) ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ ಮುಇಂ/ಸನೀ(ಉ)ವ/ಬಿಜಾ/ಭೂಸಾಪ್ರ/2010–11/6839, ದಿನಾಂಕ 30–12–2010.

ಪ್ರಸ್ತಾವನೆ :

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪುರ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಕೊಪ್ಪಳದ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣ ಸಂಖ್ಯೆ 10/04 ರಲ್ಲಿ ದಿನಾಂಕ 09–03–2005 ರಂದು ನೀಡಿರುವ ಆದೇಶವನ್ನು ಆಧರಿಸಿ ಸ್ವಾಧೀನಕ್ಕೊಳಪಟ್ಟ ಇತರೆ ಜಮೀನುಗಳಿಗೆ ಉಪವಿಭಾಗಾಧಿಕಾರಿ ಮತ್ತು ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ರಚಿಸಿರುವ ಐತೀರ್ಪಿನಂತೆ ಮೊತ್ತ ರೂ.1,50,52,044–00 ಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ 30–12–2010 ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, (ಉತ್ತರ) ವಲಯ, ಬಿಜಾಪುರ ರವರು ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 04–01–2001ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಮುಖ್ಯ ಪ್ರಕರಣ ಸಂಖ್ಯೆ : 10/04 ರಲ್ಲಿ ದಿನಾಂಕ 09–03–2005 ರಂದು ನೀಡಿರುವ ಆದೇಶದಲ್ಲಿ ಹೆಚ್ಚಿನ ಪರಿಹಾರಧನ ನಿಗದಿಪಡಿಸಿದೆ. ಸಿವಿಲ್ ನ್ಯಾಯಾಲಯದ ತೀರ್ಪನ್ನು ಆಧರಿಸಿ ಭೂಸ್ವಾಧೀನದಲ್ಲಿ ಸೇರಿದ್ದ ಇತರೆ ಈ ಕೆಳಕಂಡ ಸರ್ವೆ ನಂಬರ್‌ಗಳ ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಯ ಮೇರೆಗೆ

ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು, ಕೊಪ್ಪಳ ಇವರು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ದಿನಾಂಕ 19–06–2010 ರಂದು ಐತೀರ್ಪನ್ನು ರಚಿಸಿರುತ್ತಾರೆ.

ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ಐತೀರ್ಪಿನ ಸಂಖ್ಯೆ ಸ.ಇಂ.ಭೂಸ್ವಾ/ಸಾ/14/28(ಎ) ಅಪೀಲು/2000–01, ದಿನಾಂಕ 19–06–2010			
ಕ್ರ.ಸಂ.	ಪುರ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	7/ಬಿ	1–00	332457
2	7/ಬಿ	1–00	332457
3	7/ಬಿ	1–00	332457
4	8/ಎ	1–10	398950
5	9/ಎ	3–18	1138671
6	9/ಬಿ	5–31	1919947
7	11/ಎ	1–36	631670
8	11/ಎ	4–00	1329833
9	11/ಬಿ	2–38	972440
10	13/ಎ1	0–18	149608
11	115/2	3–22	1163604
12	115/3	1–00	332457
13	115/4	1–28	540244
14	116/ಡಿ	1–12	432195
15	117/1	2–05	706475
16	118/ಎ	6–12	1928257
17	118/ಸಿ	5–13	1604110
18	121/ಎ,ಬಿ,ಸಿ	2–17	806212
ಒಟ್ಟು			**15052044**

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ 26ನೇ ಮಾರ್ಚ್ 2011

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪುರ ಗ್ರಾಮದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಕೊಪ್ಪಳದ ಉಪ ವಿಭಾಗಾಧಿಕಾರಿ ಮತ್ತು ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ರಚಿಸಿರುವ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ.1,50,52,044–00 ಗಳನ್ನು (ಒಂದು ಕೋಟಿ ಐವತ್ತು ಲಕ್ಷದ ಐವತ್ತೆರಡು ಸಾವಿರದ ನಲವತ್ತನಾಲ್ಕು ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪಾವತಿಸಲು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಲೆಕ್ಕಾಚಾರ ತಃಖ್ತೆಯನ್ನು ಮತ್ತೊಮ್ಮೆ ದೃಢೀಕರಿಸಿಕೊಂಡು ಪಾವತಿಸತಕ್ಕದ್ದು. ಎರಡನೇ ಬಾರಿ ಹೆಚ್ಚಿನ ಮೊತ್ತ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 01 ಬಿಎಸ್‌ಜಿ 2011, ದಿನಾಂಕ 19–03–2011 ರಲ್ಲಿ ಒದಗಿಸಿರುವ ಪೂರಕ ಅನುದಾನರಿಂದ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 964

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಮನಗರ ಜಿಲ್ಲೆ ಮತ್ತು ತಾಲ್ಲೂಕು ಮೇಡನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : 3 ಮುಸದ/ಲೆಶಾ/ಲೆಸ–1/ಭೂಸ್ವಾಧೀನ/10–11/168, ದಿನಾಂಕ 24–01–2011.

ಪ್ರಸ್ತಾವನೆ :

ರಾಮನಗರ ಜಿಲ್ಲೆ ಮತ್ತು ತಾಲ್ಲೂಕು ಮೇಡನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಾನಂದೂರು ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ರಾಮನಗರಂ ಹೆಚ್ಚುವರಿ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಹೆಚ್ಚುವರಿ ಪರಿಹಾರ ಮೊತ್ತ ರೂ.1,53,115–00 ಗಳನ್ನು ಬಿಡುಗಡೆ ಮಾಡಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಓದಲಾದ ದಿನಾಂಕ 24–01–2011ರ ಪತ್ರದಲ್ಲಿ ಕೋರಿರುತ್ತಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 20–07–77ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ದಿನಾಂಕ 20–06–78 ರಂದು ರಚಿಸಿದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಮನಗರಂ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಸಂಖ್ಯೆ 27/81 ರಲ್ಲಿ ಸಿವಿಲ್ ನ್ಯಾಯಾಲಯಗಳ ದಿನಾಂಕ 05–06–02 ರಂದು ನೀಡಿರುವ ಆದೇಶದಲ್ಲಿ ಹೆಚ್ಚಿನ ಪರಿಹಾರಧನ ನಿಗದಿಪಡಿಸಿದೆ. ಅದರಂತೆ, ಪಾವತಿಸಬೇಕಾದ ಮೊತ್ತದ ವಿವರ ಕೆಳಕಂಡಂತಿದೆ:

ಕ್ರಸಂ.	ಎಲ್‌ಎಸಿ ಸಂಖ್ಯೆ	ಬಾನಂದೂರು ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	27/81	108/21	0–17	56708
		108/20	1–03	35508
		109	1–00	5506
		109	1–01	37622
ಒಟ್ಟು				**135344**

ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹವಲ್ಲವೆಂದು ಕಾನೂನು ಇಲಾಖೆಯ ಪತ್ರ ಸಂಖ್ಯೆ : ಲಾ 917 ಎಲ್‌ಎಸ್‌ಎ 2002, ದಿನಾಂಕ 02–09–02 ರಲ್ಲಿ ಅಭಿಪ್ರಾಯ ನೀಡಿದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 158 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 30ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ರಾಮನಗರ ಜಿಲ್ಲೆ ಮತ್ತು ತಾಲ್ಲೂಕು ಮೇಡನಹಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಾನಂದೂರು ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ಆದೇಶದಂತೆ ರೂ.1,35,344–00 ಗಳನ್ನು (ಒಂದು ಲಕ್ಷದ ಮೂವತ್ತೈದು ಸಾವಿರದ ಮುನ್ನೂರ ನಲವತ್ತಾಲ್ಕು ರೂ.ಗಳು ಮಾತ್ರ)ಗಳ ಪರಿಹಾರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ 105 ಆಕೋ–1/11, ದಿನಾಂಕ 10–03–2011 ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಪೂರಕ ಅನುದಾನ–III ರಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 965

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ರವರ ದಿನಾಂಕ 31.07.10ರ ಪತ್ರ ಸಂಖ್ಯೆ ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/4402.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಪಾವತಿಸಲು ರೂ.3,41,040-00 ಗಳ ಅನುದಾನ ಬಿಡುಗಡೆ ಮಾಡಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರ ಪತ್ರದಲ್ಲಿ ಕೋರಿದ್ದಾರೆ.

ಭೂಸ್ವಾಧೀನ ಕಾಯ್ದೆ ಕಲಂ 4(1) ರ ಅಧಿಸೂಚನೆಯನ್ನು ದಿನಾಂಕ 03-03-94 ರಂದು ಹೊರಡಿಸಿದ್ದು, ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರು ದಿನಾಂಕ 30-06-1997 ರಂದು ರಚಿಸಿ ಐತೀರ್ಪನ್ನು ಪ್ರತಿ ಎಕರೆಗೆ ರೂ.17,000/-ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ.

ಶ್ರೀ ಮಹಾಲಿಂಗ ರತ್ನಪ್ಪ ಕಂಬಾರ್, ಬೋರಗಲ್ ಗ್ರಾಮದ ಸ.ನಂ.288ರ 0-18 ಎಕರೆ ಜಮೀನಿನ ಭೂಮಾಲೀಕರು ಐತೀರ್ಪಿನಂತೆ ಪರಿಹಾರ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಹುಕ್ಕೇರಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. 14/03ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ 7.4.04 ರಂದು ನೀಡಿರುವ ಆದೇಶದಲ್ಲಿ ಭೂಮೌಲ್ಯವನ್ನು 2.00 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ಈ ಆದೇಶದ ವಿರುದ್ಧ ಸಹಾಯಕ ಆಯುಕ್ತರು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರು ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ. ಸಂಖ್ಯೆ 7593/04 ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ 4-3-2005 ರಂದು ಮೇಲ್ಮನವಿಯನ್ನು ವಜಾ ಮಾಡಿದೆ. ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿ.ಸಿ. ಸಂಖ್ಯೆ 8433/05 ನ್ನು ದಾಖಲಿಸಿದ್ದು, ದಿನಾಂಕ 19-09-05 ರಂದು ವಜಾಗೊಂಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕಣಗಳ ವಿವರ ಕೆಳಕಂಡಂತಿದೆ :

ಕ್ರಸಂ.	ಎಲ್‌ಎಸಿ ಸಂಖ್ಯೆ	ಎಂಎಫ್‌ಎ ಸಂಖ್ಯೆ	ಬೋರಗಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	14/03	7593/04	288	0-18	3,41,040-00

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 124 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 26ನೇ ಮಾರ್ಚ್ 2011

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ಹದ್ದಿಯಲ್ಲಿ ಇಂಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 288ರ 0-18 ರ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಲೆಕ್ಕಾಹಾಕಿದ ಪರಿಹಾರ ರೂ.3,41,040-00 ಗಳನ್ನು (ಮೂವತ್ತೊಂದು ಲಕ್ಷದ ನಲವತ್ತೊಂದು ಸಾವಿರದ ನಲವತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 01 ಬಿಎಸ್‌ಜಿ 2011, ದಿನಾಂಕ 19-03-2011 ರಲ್ಲಿ ಒದಗಿಸಿರುವ ಪೂರಕ ಅನುದಾನ-III ರಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಪಿ.ಆರ್. 966

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕಿನ ನಾರಬಂಡಾ ಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ವಡವಟ್ಟಿ ಗ್ರಾಮದ ಜಮೀನುಗಳಿಗೆ ನೀಡಬೇಕಾದ ಪರಿಹಾರ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ ಮುಇಂ/ಸನೀ(ಉ)ವ/ಬಿಜಾ/ಭೂಸಾಪ್ರ/2010–11/4473, ದಿನಾಂಕ 05–08–10.

ಪ್ರಸ್ತಾವನೆ :

ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕಿನ ನಾರಬಂಡಾ ಕೆರೆ ನಿರ್ಮಾಣಕ್ಕಾಗಿ ವಡಗಟ್ಟಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 60–07 ಎಕರೆ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗಾಗಿ ಠೇವಣಿ ಮಾಡಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 05–08–10ರ ಪತ್ರದಲ್ಲಿ ಕೋರಿರುತ್ತಾರೆ.

ಈ ಪ್ರಕರಣದಲ್ಲಿ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 07–01–10 ರಂದು ಹೊರಡಿಸಲಾಗಿದೆ. ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ ಕಂಇ 42 ಭೂಸ್ವಾಹಾ 2000, ದಿನಾಂಕ 08–10–2001ರ ಪ್ರಕಾರ 4(1) ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸಂಭವನೀಯ ವೆಚ್ಚದ ಶೇ.50 ರಷ್ಟನ್ನು ಮತ್ತು 6(1)ರ ಅಧಿಸೂಚನೆ ಪೂರ್ವದಲ್ಲಿ ಇನ್ನುಳಿದ ಮೊತ್ತವನ್ನು ಠೇವಣಿ ಮಾಡಲು ಸ್ಪಷ್ಟಪಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸನೀಇ 235 ಭೂಸ್ವಾಪ್ರ 2005, ದಿನಾಂಕ 19–04–07 ರಲ್ಲಿ ರೂ.9,15,847/–ಗಳನ್ನು ಮುಂಗಡ ಠೇವಣಿ ಮಾಡಲು ಅನುಮೋದನೆ ನೀಡಲಾಗಿದೆ. ಈಗಾಗಲೇ ಭೂಸ್ವಾಧೀನ ಕಾಯ್ದೆ ಕಲಂ 6(1)ರ ಅಧಿಸೂಚನೆ ಹೊರಡಿಸಿರುವುದರಿಂದ, ಉಳಿದ ಮೊತ್ತವನ್ನು ಠೇವಣಿ ಮಾಡಲು ನಿರ್ಧರಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 116 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 29ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕಿನ ನಾರಬಂಡಾ ಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ವಡವಟ್ಟಿ ಗ್ರಾಮದ ಜಮೀನುಗಳಿಗೆ ಪರಿಹಾರ ಪಾವತಿಸಲು ರೂ.20,86,772/– (ಇಪ್ಪತ್ತು ಲಕ್ಷದ ಎಂಭತ್ತಾರು ಸಾವಿರದ ಏಳು ನೂರ ಎಪ್ಪತ್ತೆರಡು ರೂ.ಗಳು ಮಾತ್ರ)ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 01 ಬಿಎಸ್‌ಜಿ 2011, ದಿನಾಂಕ 19–03–2011 ರಲ್ಲಿ ಒದಗಿಸಿರುವ ಪೂರಕ ಅನುದಾನ–III ರಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್,

ಪಿ.ಆರ್. 967

ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಕಂದಾಯ ಸಚಿವಾಲಯ

ವಿಷಯ : ಕೃಷಿ ಗಣತಿ 2010–11ಕ್ಕೆ ಎರಡನೇ ಹಂತದ ಸಮೀಕ್ಷೆಗೆ ನಮೂನೆ ಹೆಚ್‌ಗಳನ್ನು ಮುದ್ರಿಸಲು ಸರ್ಕಾರದ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ : ರಾಜ್ಯ ಕೃಷಿ ಗಣತಿ ಆಯುಕ್ತರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪತ್ರ ಸಂ. ಆಸಾನಿ/58/ಎಜಿಸಿ/2011, ದಿನಾಂಕ : 22–03–2011.

ಪ್ರಸ್ತಾವನೆ:

ಭಾರತ ಸರ್ಕಾರದ ಕೃಷಿ ಮಂತ್ರಾಲಯದ ಸೂಚನೆ ಮೇರೆಗೆ ಕೃಷಿ ಗಣತಿ ಯೋಜನೆಯಡಿಯಲ್ಲಿ 2010–11ನೇ ವರ್ಷವನ್ನು ಆಧಾರವಾಗಿಟ್ಟುಕೊಂಡು, 9ನೇ ಕೃಷಿ ಗಣತಿಯ ಕ್ಷೇತ್ರ ಕಾರ್ಯಾಚರಣೆಯನ್ನು ರಾಜ್ಯಾದ್ಯಂತ 2011ನೇ ಜುಲೈ ತಿಂಗಳಿನಲ್ಲಿ ಕೈಗೊಳ್ಳಬೇಕಾಗಿರುವುದರಿಂದ, ಗಣತಿಯ ಸಮಯದಲ್ಲಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸುವ ಸಲುವಾಗಿ ಎರಡನೇ ಹಂತದ ಸಮೀಕ್ಷೆಗೆ ನಮೂನೆ ಹೆಚ್‌ಗಳನ್ನು (ಪ್ರಪತ್ರ ಹೆಚ್‌ಗಳನ್ನು) ಏಪ್ರಿಲ್ ತಿಂಗಳಿನೊಳಗಾಗಿ ಮುದ್ರಿಸಬೇಕೆಂದು, ಹಾಗೂ ಎಲ್ಲಾ ಹಂತದ ನಮೂನೆಗಳನ್ನು ಮುದ್ರಿಸಲು ಭಾರತ ಸರ್ಕಾರದ ಕೃಷಿ ಮಂತ್ರಾಲಯ ಒಟ್ಟು ರೂ. 50.00 ಲಕ್ಷಗಳ ಅನುದಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, 2010–11ನೇ ಸಾಲಿನ 31–03–2011 ರೊಳಗಾಗಿ ಮುದ್ರಣದ ನಿಮಿತ್ತ ಖರ್ಚು ಮಾಡಬೇಕಾಗಿರುವುದರಿಂದ, ಪಾರದರ್ಶಕ ನಿಯಮದ ಪ್ರಕಾರ (ಕೆ.ಟಿ.ಪಿ.ಪಿ. ಆಕ್ಟ್) ಟೆಂಡರ್ ಕರೆಯಲಾಗಿದ್ದು, ಅದರಲ್ಲಿ 5 ಟೆಂಡರ್‌ದಾರರು ಟೆಂಡರ್ ಹಾಕಿದ್ದು, ಅವುಗಳಲ್ಲಿ ಮೆ: ಕುಮಾರ್ ಎಂಟರ್‌ಪ್ರೈಸಸ್, ನಂ. 65, 1ನೇ ಮಹಡಿ, 2ನೇ ಹಂತ, ವಿನಾಯಕ ಲೇಔಟ್, ಪುಟ್ಟೇನಹಳ್ಳಿ, ಸಿಂಗನಾಯಕನಹಳ್ಳಿ ಪೋಸ್ಟ್, ಯಲಹಂಕ, ಬೆಂಗಳೂರು–560 064. ಸದರಿ

ನಮೂನೆಗಳ 15 ಲಕ್ಷ ಪ್ರತಿಗಳಿಗೆ ಅತೀ ಕಡಿಮೆ ವೆಚ್ಚ ರೂ. 20,47,500/– (ರೂಪಾಯಿ ಇಪ್ಪತ್ತು ಲಕ್ಷ ನಲವತ್ತೇಳು ಸಾವಿರದ ಐದುನೂರು ಮಾತ್ರ) ಗಳನ್ನು (ತೆರಿಗೆ ಸೇರಿ) ಕೋಟ್ ಮಾಡಿರುತ್ತಾರೆ. ಆದೇಶ ನೀಡಿದ 05 ದಿನಗಳೊಳಗಾಗಿ ಮುದ್ರಿಸಿ ಕೊಡಲು ಒಪ್ಪಿರುತ್ತಾರೆಂದು ತಿಳಿಸಿ, ಈ ಬಗ್ಗೆ ಸರ್ಕಾರದ ಆದೇಶ ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ರಾಜ್ಯ ಕೃಷಿ ಗಣತಿ ಆಯುಕ್ತರು ಸಾಂಖ್ಯಿಕ ಮತ್ತು ಆರ್ಥಿಕ ನಿರ್ದೇಶನಾಲಯ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಎರಡನೇ ಹಂತದ ನಮೂನೆ ಹೆಚ್(ಪ್ರಪತ್ರ–ಹೆಚ್)ಗಳನ್ನು ಮುದ್ರಿಸಲು ಅನುಮತಿ ನೀಡಲು ತಿಳಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 120 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ: 26.03.2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ 2010–11ನೇ ಸಾಲಿನಲ್ಲಿ 9ನೇ ಕೃಷಿ ಗಣತಿಯ ಕಾರ್ಯಾಚರಣೆಗೆ ಎರಡನೇ ಹಂತದ ಸಮೀಕ್ಷೆಗೆ ನಮೂನೆ–ಹೆಚ್ (ಪ್ರಪತ್ರ–ಹೆಚ್)ಗಳನ್ನು ರೂ. 20,47,500–00 (ರೂಪಾಯಿ ಇಪ್ಪತ್ತು ಲಕ್ಷ ನಲವತ್ತೇಳು ಸಾವಿರದ ಐದುನೂರು ಮಾತ್ರ) ಗಳಲ್ಲಿ ಮೆ: ಕುಮಾರ್ ಎಂಟರ್‌ಪ್ರೈಸಸ್, ನಂ. 65, 1ನೇ ಮಹಡಿ, 2ನೇ ಹಂತ, ವಿನಾಯಕ ಲೇಔಟ್, ಪುಟ್ಟೇನಹಳ್ಳಿ, ಸಿಂಗನಾಯಕನಹಳ್ಳಿ ಪೋಸ್ಟ್, ಯಲಹಂಕ, ಬೆಂಗಳೂರು–560 064. ಇವರಿಂದ ಮುದ್ರಿಸಲು ರಾಜ್ಯ ಕೃಷಿ ಗಣತಿ ಆಯುಕ್ತರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಅನುಮತಿ ನೀಡಿ ಆದೇಶಿಸಿದೆ

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 3454–02–204–0–03(059) ಇತರೇ ಖರ್ಚು ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್.988 ಕಂದಾಯ ಇಲಾಖೆ(ವಿ.ನಿ. & ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ ತಾಲ್ಲೂಕು ಹಾಲಿ ನಿವೃತ್ತರು ಮತ್ತು ಶ್ರೀ ಎಸ್.ವಿ. ದೇವದಾಸ, ಹಿಂದಿನ ಕಂದಾಯ ನಿರೀಕ್ಷಕ, ಮುಧೋಳ, ಬಾಗಲಕೋಟೆ ಜಿಲ್ಲೆ, ಪ್ರಸ್ತುತ ಕಂದಾಯ ನಿರೀಕ್ಷಕರು, ಎಸ್.ಎಲ್.ಎ.ಓ ಕಛೇರಿ, ಯು.ಕೆ.ಪಿ. ಜಮಖಂಡಿ ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಕಂಇ 11 ಎಡಿಇ 2006 ದಿನಾಂಕ : 21–12–2006.
2. ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 11 ಎಡಿಇ 2006, ದಿನಾಂಕ : 16–01–2007.
3. ಶ್ರೀ ಎಸ್.ಎಸ್.ಚಿಂಚಲಿ, ನಿವೃತ್ತ ತಹಶೀಲ್ದಾರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ : 02–03–2009.
4. ಶ್ರೀ ಎಸ್.ವಿ. ದೇವದಾಸ್, ಹಿಂದಿನ ಕಂದಾಯ ನಿರೀಕ್ಷಕರು, ಮುಧೋಳ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ : 16–02–2007.
5. ಸರ್ಕಾರದ ಆದೇಶ ಸಂಖ್ಯೆ : ಕಂಇ 11 ಎಡಿಇ 2006 ದಿನಾಂಕ : 21–11–2009.
6. ವಿಚಾರಣಾಧಿಕಾರಿಗಳಾದ ಶ್ರೀ ಫ.ಸಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರು ಸರ್ಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿ ದಿನಾಂಕ : 26–07–2010.
7. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 11 ಎಡಿಇ 2006 ದಿನಾಂಕ : 20–10–2010.
8. ಶ್ರೀ ಎಸ್.ಎಸ್.ಚಿಂಚಲಿ, ನಿವೃತ್ತ ತಹಶೀಲ್ದಾರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ : 02–11–2010.
9. ಶ್ರೀ ಎಸ್.ವಿ. ದೇವದಾಸ್, ಹಿಂದಿನ ಕಂದಾಯ ನಿರೀಕ್ಷಕರು, ಮುಧೋಳ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ : 16–12–2010.

ಪ್ರಸ್ತಾವನೆ:

ಶ್ರೀ ಎಸ್.ಎಲ್.ಚಿಂಚಲಿ, ಪ್ರಸ್ತುತ ನಿವೃತ್ತ ತಹಶೀಲ್ದಾರ್ ರವರು ಈ ಹಿಂದೆ ಮುಧೋಳ್ ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮುಧೋಳ್ ತಾಲ್ಲೂಕಿನ ಕುಳಲಿ ಗ್ರಾಮದ ರಿ.ಸ.ನಂ. 58 ಹಾಗು 64ರ ಜಮೀನಿನ ಮಂಜೂರಾತಿಯನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 7ರಲ್ಲಿ ಭೂ ಮಂಜೂರಾತಿ ಮಾಡಲು ಅಧಿಕಾರವಿಲ್ಲದಿದ್ದರೂ ಅವರು ಭೂ ಮಂಜೂರಾತಿ ಮಾಡುವ ಪೂರ್ವದಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 3,4,5 ಮತ್ತು 6ರ ವಿಧಿವಿಧಾನಗಳನ್ನು ಅನುಸರಿಸಿ ಮಂಜೂರಾತಿ ನೀಡಬೇಕಾಗಿದ್ದು, ಆ ರೀತಿ ಮಾಡದೇ ಸದರಿಯವರು ಭೂ ಮಂಜೂರಾತಿ ಮಾಡಿರುವುದು ನಿಯಮಗಳಿಗೆ ವ್ಯತಿರಿಕ್ತವಾಗಿದ್ದು, ಈ ಬಗ್ಗೆ ಬಾಗಲಕೋಟೆ ಜಿಲ್ಲಾಧಿಕಾರಿಗಳು ದಿನಾಂಕ : 18–11–2005 ರಂದು 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ & ಮೇ) ನಿಯಮಗಳನ್ವಯ ಆರೋಪಣಾ ಪಟ್ಟಿ ಅನುಬಂಧ 1 ರಿಂದ 4 ರವರೆಗೆ ಕಾರಣ ಕೇಳುವ ನೋಟೀಸನ್ನು ಶ್ರೀ ಎಸ್.ಎಲ್.ಚಿಂಚಲಿ, ನಿವೃತ್ತ ತಹಶೀಲ್ದಾರ್ ಮತ್ತು ಶ್ರೀ ಎಸ್.ವಿ. ದೇವದಾಸ್, ಕಂದಾಯ ನಿರೀಕ್ಷಕರು ಇವರುಗಳಿಗೆ ಜಾರಿ ಮಾಡಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಶ್ರೀ ಎಸ್.ವಿ. ದೇವದಾಸ್, ಕಂ.ನಿ. ರವರು ದಿನಾಂಕ : 24–12–2005 ರಂದು ಲಿಖಿತ ಹೇಳಿಕೆ ನೀಡಿ ಅವರ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ. ಶ್ರೀ ಎಸ್.ಎಲ್. ಚಿಂಚಲಿ, ನಿವೃತ್ತ ತಹಶೀಲ್ದಾರ್ ರವರು ದಿನಾಂಕ : 09–01–2006 ರಂದು ಲಿಖಿತ ಹೇಳಿಕೆ ಸಲ್ಲಿಸಿ, ತಮಗೆ ನಿಯಮದ ಅರಿವು ಸರಿಯಾಗಿ ಆಗದೇ ತಪ್ಪುಗ್ರಹಿಕೆಯಿಂದ ಆದೇಶ ಮಾಡಿರುವುದಾಗಿ ತಿಳಿಸಿದ್ದ ಹಿನ್ನೆಲೆಯಲ್ಲಿ, ಅವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅವಶ್ಯವಿರುತ್ತದೆಂದು ಶ್ರೀ ಎಸ್.ಎಲ್.ಚಿಂಚಲಿ ರವರು ಸೇವೆಯಿಂದ ನಿವೃತ್ತರಾಗಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೆ.ಸಿ.ಎಸ್.ಆರ್. ನಿಯಮ 214 ರನ್ವಯ ಜರುಗಿಸಲು ಅನುಮತಿ ನೀಡಲು ಬಾಗಲಕೋಟೆ ಜಿಲ್ಲಾಧಿಕಾರಿಗಳು ದಿನಾಂಕ : 30–01–2006 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 21–12–2006ರಲ್ಲಿ ,

ಬಾಗಲಕೋಟೆ ಜಿಲ್ಲಾಧಿಕಾರಿಗಳು ದಿನಾಂಕ : 18–11–2005 ರಂದು ಹೊರಡಿಸಿದ್ದ ಕಾರಣ ಕೇಳುವ ನೋಟೀಸನ್ನು ರದ್ದುಪಡಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಎಸ್.ಎಲ್.ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಹಾಲಿ ನಿವೃತ್ತರು ಇವರ ವಿರುದ್ಧದ ಮೇಲೆ ಹೇಳಿದ ಆರೋಪದ ಬಗ್ಗೆ ಇಲಾಖಾ ವಿಚಾರಣೆ ನಡೆಸಬೇಕೆಂದು ಹಾಗೂ ಈ ವಿಚಾರಣೆಯನ್ನು 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ & ಮೇ) ನಿಯಮಾವಳಿಗಳ ನಿಯಮ 11 ಮತ್ತು 11ಎ ರಡಿಯಲ್ಲಿ ನಿಗದಿಪಡಿಸಿರುವ ಕಾರ್ಯಭಾರವನ್ನು ಅನುಸರಿಸಬೇಕೆಂದು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (2)ರ ದಿನಾಂಕ : 16–1–2007ರ ಸರ್ಕಾರದ ಕಾರಣ ಕೇಳುವ ನೋಟೀಸಿನೊಂದಿಗೆ ಬಾಗಲಕೋಟೆ ಜಿಲ್ಲಾಧಿಕಾರಿಗಳು ಕಳುಹಿಸಿದ ದೋಷಾರೋಪಣೆ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಶ್ರೀ ಎಸ್.ಎಲ್.ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ ತಾಲ್ಲೂಕು (ಹಾಲಿ ನಿವೃತ್ತರು), ಬಾಗಲಕೋಟೆ ಜಿಲ್ಲೆ ಇವರಿಗೆ ಹಾಗೂ ಶ್ರೀ ಎಸ್.ವಿ. ದೇವದಾಸ್, ಕಂದಾಯ ನಿರೀಕ್ಷಕರು, ಮುಧೋಳ ತಹಶೀಲ್ದಾರ್ ಕಾರ್ಯಾಲಯ ಇವರಿಗೆ ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ.(ವ.ನಿ. & ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ : (3) ಮತ್ತು (4)ಗಳಲ್ಲಿ ಆರೋಪಿತರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಾ, ಅವರ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ. ಆದ್ದರಿಂದ, ಪ್ರಕರಣದ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಈ ಪ್ರಕರಣವನ್ನು ಇಲಾಖಾ ವಿಚಾರಣೆಗೆ ವಹಿಸಲು ಸರ್ಕಾರವು ನಿರ್ಧರಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ : (5)ರ ದಿನಾಂಕ : 21–11–2009ರ ಆದೇಶದಲ್ಲಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 13ರಡಿಯಲ್ಲಿ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಎಸ್.ಎಲ್. ಚಿಂಚಲಿ, ತಹಶೀಲ್ದಾರ್ (ನಿವೃತ್ತ), ಮುಧೋಳ್ ತಾಲ್ಲೂಕು ಹಾಗೂ ಶ್ರೀ ಎಸ್.ವಿ. ದೇವದಾಸ್, ಕಂದಾಯ ನಿರೀಕ್ಷಕರು, ಮುಧೋಳ್ ಇವರುಗಳ ವಿರುದ್ಧದ ಆಪಾದನೆಗಳ ಬಗ್ಗೆ ಇಲಾಖಾ ವಿಚಾರಣೆ ಜರುಗಿಸಲು, ಶ್ರೀ ಫ.ಸಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಗಣಪತಿ ಗುಡಿ ಹತ್ತಿರ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ–2 ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಮತ್ತು ಬಾಗಲಕೋಟೆ ಜಿಲ್ಲೆಯ ಮುಧೋಳ್ ತಾಲ್ಲೂಕು ತಹಶೀಲ್ದಾರ್ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ದಿನಾಂಕ : 26–07–2010ರ ವಿಚಾರಣಾ ವರದಿಯಲ್ಲಿ, ವಿಚಾರಣಾಧಿಕಾರಿಗಳು ಸರ್ಕಾರದ ಆದೇಶದಂತೆ, ಕೂಲಂಕಷವಾಗಿ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು ಹಾಲಿ ನಿವೃತ್ತರು ಮತ್ತು ಶ್ರೀ ಎಸ್.ವಿ. ದೇವದಾಸ್, ಕಂ.ವಿ, ಮುಧೋಳ ರವರುಗಳು ಮುಧೋಳ ಹೋಬಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕುಳಲಿ ಗ್ರಾಮದ ರಿ.ಸ.ನಂ. 58 ಕ್ಷೇತ್ರ 12–ಎ ಜಮೀನನ್ನು ಒಂದೇ ಕುಟುಂಬದ 6 ಜನರಿಗೆ ತಲಾ 2–ಎ ರಂತೆ ಮಂಜೂರು ಮಾಡಿರುತ್ತಾರೆ. ಸದರಿ ಜಮೀನನ್ನು ಒಂದೇ ಕುಟುಂಬದ 6 ಜನರಿಗೆ ಭೂ ಸುಧಾರಣೆ ನಿಯಮಗಳು 1974ರ ವಿಧಿವಿಧಾನಗಳನ್ನು ಅನುಸರಿಸಿ ಹಂಚಿಕೆ ಮಾಡುವ ಅಧಿಕಾರ ಉಪ ವಿಭಾಗಾಧಿಕಾರಿಗಳಿಗೆ ಮಾತ್ರ ಇದ್ದು, ಭೂ ಸುಧಾರಣೆ ಕಾಯ್ದೆ ಅಡಿ ಹಂಚಿಕೆ ಮಾಡಬೇಕಾದ ಹೆಚ್ಚುವರಿ ಜಮೀನನ್ನು ಅವರ ಅಧಿಕಾರ ವ್ಯಾಪ್ತಿಯನ್ನು ಮೀರಿ 6 ಜನರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರಡಿ ಮಂಜೂರು ಮಾಡಿ ಕರ್ತವ್ಯ ಚ್ಯುತಿ ಎಸಗಿದ್ದಾರೆ. ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್ ಹಾಲಿ ನಿವೃತ್ತರು ಇವರು ವಿಚಾರಣೆಗೆ ಖುದ್ದಾಗಿ ಹಾಜರಾಗಿದ್ದು, ಶ್ರೀ ಎಸ್.ವಿ. ದೇವದಾಸ, ಕಂ.ನಿ, ಮುಧೋಳ ಇವರ ಪರವಾಗಿ ರಕ್ಷಣಾ ಸಹಾಯಕರು ವಿಚಾರಣೆಗೆ ಹಾಜರಾಗಿರುತ್ತಾರೆ. ಆಪಾದಿತ ನೌಕರರು ಭೂ ಮಂಜೂರಾತಿ ನಿಯಮಗಳ ಅಡಿಯಲ್ಲಿ ವಿಧಿವಿಧಾನಗಳನ್ನು ಅನುಸರಿಸದೇ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಭೂ ಮಂಜೂರಾತಿ ಮಾಡಿ ತಪ್ಪು ಮಾಡಿದ್ದಾರೆ ಎಂದು ತೀರ್ಮಾನಿಸಿ, ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಆಪಾದಿತ ನೌಕರರ ವಿರುದ್ಧದ ಮೂರು ಆರೋಪಗಳನ್ನು ಇಬ್ಬರು ಸರ್ಕಾರಿ ನೌಕರರ ಮೇಲೆ ನಿಚ್ಚಳವಾಗಿ ಮತ್ತು ನಿಸ್ಸಂದೇಹವಾಗಿ ರುಜುವಾತು ಆಗಿವೆ ಎಂದು ವರದಿ ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ : 26–07–2010ರ ವರದಿಯನ್ನು ಲಗತ್ತಿಸಿ ಆಪಾದಿತರಾದ ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು ಹಾಲಿ ನಿವೃತ್ತರು ಮತ್ತು ಶ್ರೀ ಎಸ್.ವಿ. ದೇವದಾಸ, ಕಂ.ವಿ, ಮುಧೋಳ ಇವರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ : (7) ರಂತೆ ದಿನಾಂಕ : 20–10–2010 ರಂದು ಸರ್ಕಾರದಿಂದ ಎರಡನೇ ಕಾರಣ ಕೇಳುವ ನೋಟೀಸನ್ನು ಬಾಗಲಕೋಟೆ ಜಿಲ್ಲಾಧಿಕಾರಿಗಳ ಮೂಲಕ ಜಾರಿ ಮಾಡಿ, ವಿಚಾರಣಾಧಿಕಾರಿಗಳ ವರದಿಯ ಕುರಿತು ಸಮಜಾಯಿಷಿ ಏನಾದರೂ ಇದ್ದಲ್ಲಿ ನೋಟೀಸು ತಲುಪಿದ 15 ದಿನಗಳ ಒಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರಿಗೆ ಸಲ್ಲಿಸಲು ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (8)ರ ದಿನಾಂಕ : 02–11–2010ರ ಲಿಖಿತ ಹೇಳಿಕೆಯಲ್ಲಿ, ಶ್ರೀ ಎಸ್.ಎಲ್. ಚಿಂಚಲಿ, ನಿವೃತ್ತ ತಹಶೀಲ್ದಾರ್ ರವರು ಮುಧೋಳ ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿ ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ, ಕಡತಗಳನ್ನು ನೇರವಾಗಿ ಸ್ವೀಕರಿಸುತ್ತಿರಲಿಲ್ಲ, ಕಛೇರಿ ಕೈಪಿಡಿಯನ್ವಯ ಸಾಮಾನ್ಯ ಸ್ವೀಕೃತಿ ರಿಜಿಸ್ಟರ್ ದಾಖಲು ಮಾಡಿಸಿ ನಂತರ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಟಪಾಲು ನೀಡುವ ಕರ್ತವ್ಯ ಶಿರಸ್ತೇದಾರರಿಗಿದ್ದು, ನಂತರ ವಿಷಯ ನಿರ್ವಾಹಕರು ಟಿಪ್ಪಣಿ ಸಹಿತ ಕಡತ ಮಂಡಿಸಬೇಕಾಗಿರುತ್ತದೆ. ಈ ಇಲಾಖಾ ತನಿಖೆಯಲ್ಲಿ ಸಾಮಾನ್ಯ ಸ್ವೀಕೃತಿ ರಿಜಿಸ್ಟರ್ ಹಾಗೂ ವಿಷಯ ನಿರ್ವಾಹಕರ ದಿನಚರಿ ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ. ವಿಷಯ ನಿರ್ವಾಹಕರು ಮಂಡಿಸಿದ ಟಿಪ್ಪಣಿಯನ್ನು ಪರಿಶೀಲಿಸಿ ಭೂ ಮಂಜೂರಾತಿ ನಿಯಮ 1969ರ ನಿಯಮ–7 ರನ್ವಯ ಮಂಜೂರು ಮಾಡಲು ಟಿಪ್ಪಣಿ ಮಂಡಿಸಿದ್ದು, ಬಹಳಷ್ಟು ಕೆಲಸ ಇದ್ದರಿಂದ, ಕಾರ್ಯಾಲಯದ ಟಿಪ್ಪಣಿ ಪರಿಶೀಲಿಸಿ ನಿಯಮ–7 ರನ್ವಯ ತಮಗೆ ಅಧಿಕಾರ ಇದೆ ಎಂದು ಜಮೀನನ್ನು ಮಂಜೂರು ಮಾಡಲಾಗಿದೆ. ಬೇರೆ ಕಡತವನ್ನು ಪರಿಶೀಲಿಸುವಾಗ ಅವರು ದಿನಾಂಕ : 28–03–2005 ರಂದು ಮಾಡಿದ ಆದೇಶ ಕಾನೂನು ಬದ್ಧ ಇಲ್ಲವೆಂದು ತಮಗೆ ತಿಳಿದು ಬಂದಿದ್ದು, ಈ ವಿಷಯವನ್ನು ಅಂದಿನ ಉಪ ವಿಭಾಗಾಧಿಕಾರಿಗಳು, ಜಮಖಂಡಿ ರವರ ಗಮನಕ್ಕೆ ತಂದಿದ್ದು, ತಮ್ಮ ವಿನಂತಿಯ ಮೇರೆಗೆ ಉಪ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದ ಮೇರೆಗೆ ಸದರಿ ಆದೇಶವನ್ನು ರದ್ದು ಪಡಿಸಲು ಜಿಲ್ಲಾಧಿಕಾರಿಗಳು ದಿನಾಂಕ : 21–09–2005 ರಂದು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಉಪ ವಿಭಾಗಾಧಿಕಾರಿಗಳು ದಿನಾಂಕ :

28–03–2005 ರಂದು ತಹಶೀಲ್ದಾರರು ಮಾಡಿದ ಮೂರು ಆದೇಶಗಳನ್ನು ರದ್ದುಪಡಿಸಿರುತ್ತಾರೆ. ತಾವು ಉದ್ದೇಶಪೂರ್ವಕವಾಗಿ ಅಥವಾ ನಿರ್ದಿಷ್ಟ ವ್ಯಕ್ತಿಗೆ ಅಥವಾ ನಿರ್ದಿಷ್ಟ ಕುಟುಂಬಕ್ಕೆ ಸಹಾಯ ಮಾಡಿದ ದೃಷ್ಟಿಯಿಂದ ಆದೇಶ ಮಾಡಿದ್ದಲ್ಲಿ ಅವರಾಗಿಯೇ ತಮ್ಮ ತಪ್ಪು ತಿಳುವಳಿಕೆಯಿಂದ ಆದೇಶ ಮಾಡಿದ್ದನ್ನು ಹೇಳುತ್ತಿರಲಿಲ್ಲ. ಈಗಾಗಲೇ ವಿವರಿಸಿರುವಂತೆ, ದಿನಾಂಕ : 28–03–2005 ರಂದು ಮಾಡಿದ ಮೂರು ಆದೇಶಗಳನ್ನು ರದ್ದುಪಡಿಸಿರುವುದರಿಂದ ಸರ್ಕಾರಕ್ಕೆ ಯಾವುದೇ ಹಾನಿ ಉಂಟಾಗಿರುವುದಿಲ್ಲ, ತಾವು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಈಗಾಗಲೇ ಸೇವೆಯಿಂದ ನಿವೃತ್ತಿಯಾಗಿದ್ದು, ತಾವು ಮಾಡಿದ ಆದೇಶದಿಂದ ಸರ್ಕಾರಕ್ಕೆ ಯಾವುದೇ ತರಹದ ಹಾನಿ ಆಗಿರುವುದಿಲ್ಲವಾದ್ದರಿಂದ, ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ವಿರುದ್ಧ ಪ್ರಾರಂಭಿಸಲಾದ ಇಲಾಖಾ ತನಿಖೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (9)ರ ದಿನಾಂಕ : 16–12–2010ರ ಲಿಖಿತ ಹೇಳಿಕೆಯಲ್ಲಿ ಶ್ರೀ ಎಸ್.ವಿ. ದೇವದಾಸ್, ಹಿಂದಿನ ಕಂದಾಯ ನಿರೀಕ್ಷಕರು, ಮುಧೋಳ್ ರವರು ಅವರ ಮೇಲೆ ಹೊರಿಸಿರುವ ಮೂರು ಆಪಾದನೆಗಳ ಕುರಿತು, ಒಂದೇ ಕುಟುಂಬದವರಿಗೆ ಸದರಿ ಜಮೀನುಗಳನ್ನು ಮಂಜೂರಿಸಲು ಶಿಫಾರಸ್ಸು ಮಾಡಿರುವುದಿಲ್ಲ, ಮಂಜೂರಿ ಪಡೆದವರು ಒಂದೇ ಕುಟುಂಬದ ಸದಸ್ಯರಾಗಿರುವುದಿಲ್ಲ, ಸದರಿಯವರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದು, ಮುಧೋಳ ತಾಲ್ಲೂಕಿನ ಕುಳಲಿ ಗ್ರಾಮದ ಮತದಾರರ ಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಲ್ಲಿಸುತ್ತಾ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ–2(6) ರನ್ವಯ (ಅನುಬಂಧ–2) ಕುಟುಂಬವನ್ನು (ಜಜಜಿಟಿಜ) ಮಾಡಲಾಗಿದ್ದು, ಅದರಂತೆ ಒಂದೇ ಕುಟುಂಬದವರಿಗೆ ಜಮೀನನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುವ ಆಪಾದನೆ ಸತ್ಯಕ್ಕೆ ದೂರವಾಗಿದ್ದು, ಈ ಆಪಾದನೆ ತಮ್ಮ ಮೇಲೆ ದೃಢಪಡುವುದಿಲ್ಲ. ಸದರಿ ಜಮೀನುಗಳು ಹೆಚ್ಚುವರಿ ಜಮೀನು ಎನ್ನುವುದು ತಮಗೆ ಗೊತ್ತಿಲ್ಲವೆಂದು ತಹಶೀಲ್ದಾರರು, ತಮ್ಮ ದಿನಾಂಕ : 01–07–2004ರ ಅಧಿಸೂಚನೆಯಲ್ಲಿ ಈ ಜಮೀನುಗಳನ್ನು ಸರಕಾರಿ ಪಡ ಎಂದು ಪರಿಗಣಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 3(3)ರನ್ವಯ ಹಂಚಿಕೆ ಲಭ್ಯವಿರುವುದಾಗಿ ಪ್ರಕರಣೆ ಹೊರಡಿಸಿರುತ್ತಾರೆ. ಸದರಿ ಜಮೀನುಗಳ ಹಕ್ಕು ರಿಜಿಸ್ಟರ್ ಉತಾರೆ (ಆರ.ಟಿ.ಸಿ.) ಯಲ್ಲಿ ಈ ಜಮೀನುಗಳು ಹೆಚ್ಚುವರಿ ಜಮೀನುಗಳು ಆಗಿವೆ ಎಂದು ನಮೂದಾಗಿರುವುದಿಲ್ಲ. ಈಗಲೂ ಸಹ ಈ ಜಮೀನುಗಳು ಸರಕಾರಿ ಪಡ ಎಂದು ದಾಖಲಾಗಿದ್ದ ಬಗ್ಗೆ ಗೇಣಿ ಮತ್ತು ಪಹಣಿ ಪತ್ರಿಕೆಯಲ್ಲಿ ನೋಡಬಹುದಾಗಿದೆ ಎಂದು ತಿಳಿಸುತ್ತಾ, ಮೇಲಿನ ಮಂಜೂರಾತಿಯು ನಿಯಮಾನುಸಾರ ಇಲ್ಲವೆಂದು ಮಾನ್ಯ ಉಪ ವಿಭಾಗಾಧಿಕಾರಿಗಳು, ಜಮಖಂಡಿ ರವರು ಮುಧೋಳ ತಾಲ್ಲೂಕಿನ ಕುಳಲಿ ಗ್ರಾಮದ ರಿ.ಸ.ನಂ. 58 ಹಾಗೂ 64ಕ್ಕೆ ಸಂಬಂಧಿಸಿದಂತೆ, ಮುಧೋಳ ತಹಶೀಲ್ದಾರ್ ರವರು ಮಾಡಿರುವ ಆದೇಶಗಳನ್ನು ರದ್ದುಪಡಿಸಿ ಆದೇಶಿಸಿರುತ್ತಾರೆ. ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 3, 4, 5, 6, 7ಗಳು ತಹಶೀಲ್ದಾರರ ಕಛೇರಿಯಲ್ಲಿ ಮಾಡಬೇಕಾದ ಕೆಲಸ ಬಗ್ಗೆ ಇದ್ದು, ಈ ನಿಯಮಗಳು ತಮಗೆ ಸಂಬಂಧವಲ್ಲವೆಂದು ಮತ್ತು ಈ ನಿಯಮಗಳನ್ನು ಉಲ್ಲಂಘಿಸಿರುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಅವರು ಕಡತವನ್ನು ನೇರವಾಗಿ ತಹಶೀಲ್ದಾರರಿಗೆ ಕೊಟ್ಟ ಆಪಾದನೆ ಬಗ್ಗೆ ಸಾಕ್ಷಿದಾರರಾದ ಶ್ರೀ ಮಹೇಶ ಪಾಂಡವ ಇವರು ವಿಚಾರಣಾ ಸಮಯದಲ್ಲಿ ದಾಖಲೆಗಳನ್ನು ಕಾರ್ಯಾಲಯದ ಸ್ವೀಕೃತಿ ವಿಭಾಗದಲ್ಲಿ ನೀಡಿರುವುದು ಎಂದು ಒಪ್ಪಿಕೊಂಡಿರುತ್ತಾರೆ. ಮೇಲಿನ ಹಿನ್ನೆಲೆಯಲ್ಲಿ ಅವರು ಯಾವುದೇ ತಪ್ಪು ಎಸಗಿರುವುದಿಲ್ಲವೆಂದು ಸ್ಪಷ್ಟ ಪಡಿಸುತ್ತಾ, ನಿಯಮಬಾಹಿರವಾಗಿ ತಹಶೀಲ್ದಾರರು ಮಂಜೂರು ಮಾಡಿರುವ ಜಮೀನುಗಳನ್ನು ಜಮಖಂಡಿ ಉಪ ವಿಭಾಗಾಧಿಕಾರಿಗಳು ಮರಳಿ ಸರ್ಕಾರಕ್ಕೆ ತೆಗೆದುಕೊಂಡಿದ್ದು, ಗ್ರಾಮ ದಾಖಲೆಗಳಲ್ಲಿ ಮಂಜೂರುದಾರರ ಹೆಸರುಗಳನ್ನು ತೆಗೆದುಹಾಕಿ ಈಗಾಗಲೇ ಸರ್ಕಾರದ ಹೆಸರನ್ನು ದಾಖಲಿಸಿರುವುದರಿಂದ ಅವರು ಸರ್ಕಾರಕ್ಕೆ ಯಾವುದೇ ಆರ್ಥಿಕ ಹಾನಿಯನ್ನು ಉಂಟು ಮಾಡಿರುವುದಿಲ್ಲ. ವಿಚಾರಣಾಧಿಕಾರಿಗಳ ವರದಿಯಲ್ಲಿ ಅವರು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 23ನ್ನು ಪಾಲಿಸದೇ ಇರುವುದು ಕಂಡು ಬಂದಿದ್ದು, 3 ಜನ ಸಾಕ್ಷಿದಾರರು ತಮ್ಮ ಮೇಲೆ ಮಾಡಲಾದ 3 ಆಪಾದನೆ ಕುರಿತು ತಮಗೆ ಏನೂ ಗೊತ್ತಿರುವುದಿಲ್ಲವೆಂದು ತಿಳಿಸಿದ್ದರೂ ಸಹ ವಿಚಾರಣಾಧಿಕಾರಿಗಳು ತಮ್ಮ ಮೇಲೆ ಮಾಡಲಾದ ಎಲ್ಲಾ ಆಪಾದನೆಗಳು ಸ್ಥಿರಪಡುತ್ತವೆ ಎಂಬ ಅಭಿಪ್ರಾಯಕ್ಕೆ ಬಂದಿದ್ದು ತಿಳಿದಿಲ್ಲವೆಂದು, ವಿಚಾರಣಾಧಿಕಾರಿಗಳು ನೀಡಿದ ಕಾರಣಗಳನ್ನು ಆಪಾದನೆಗೆ ಸಂಬಂಧಪಡದೇ ಇರುವ ವಿಷಯಗಳನ್ನು ಪ್ರಸ್ತಾಪಿಸಿ, ವೈಯಕ್ತಿಕ ಟೀಕೆಗಳನ್ನು ಮಾಡಿರುವುದರಿಂದ ವಿಚಾರಣಾಧಿಕಾರಿಗಳ ವರದಿಯನ್ನು ತಿರಸ್ಕರಿಸಿ ತಮ್ಮ ಮೇಲೆ ಮಾಡಲಾದ ಮೂರು ಆಪಾದನೆಗಳಿಂದ ದೋಷಮುಕ್ತರನ್ನಾಗಿ ಮಾಡಲು ಕೋರಿರುತ್ತಾರೆ.

ಆಪಾದಿತರಾದ ಶ್ರೀ ಎಸ್.ಎಸ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು ಹಾಲಿ ನಿವೃತ್ತರು ಮತ್ತು ಶ್ರೀ ಎಸ್.ವಿ. ದೇವದಾಸ್, ಹಿಂದಿನ ಕಂ.ನಿ, ಮುಧೋಳ ರವರು ಸರ್ಕಾರಕ್ಕೆ ಸಲ್ಲಿಸಿರುವ ಅವರ ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಒಂದೇ ಕುಟುಂಬದ ಸದಸ್ಯರಿಗೆ ಜಮೀನು ಮಂಜೂರು ಮಾಡಲು ಶಿಫಾರಸ್ಸು ಮಾಡಿಲ್ಲವೆಂದು ಕಂದಾಯ ನಿರೀಕ್ಷಕರು ಶಿಫಾರಸ್ಸು ಮಾಡಿದ ಫಲಾನುಭವಿಗಳು ಒಂದೇ ತಂದೆಯ ಮಕ್ಕಳಾಗಿದ್ದರೂ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದಾರೆಂದು ಮತದಾರರ ಪಟ್ಟಿಯಿಂದ ದೃಢವಾಗಿದ್ದು, ಈ ಬಗ್ಗೆ ತಹಶೀಲ್ದಾರ್ ಕಛೇರಿಯಿಂದ ದಿನಾಂಕ : 01–07–2004 ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಶಿಫಾರಸ್ಸು ಮಾಡಿರುವ ಜಮೀನು ಸರ್ಕಾರಿ ಪಡ ಜಮೀನು ಎಂದು ಅಧಿಸೂಚನೆ ಹೊರಡಿಸಿದ್ದು, ಕಂದಾಯ ನಿರೀಕ್ಷಕರ ಶಿಫಾರಸ್ಸಿನನ್ವಯ ತಹಶೀಲ್ದಾರರು ಜಮೀನು ಮಂಜೂರು ಮಾಡಿದ್ದು, ಭೂ ಮಂಜೂರಾತಿ ನಿಯಮ–7 ರನ್ವಯ ಈ ಅಧಿಕಾರ ತಮಗೆ ಇಲ್ಲವೆಂದು ಕಂಡು ಬಂದ ತಕ್ಷಣ ತಹಶೀಲ್ದಾರರು ಇದನ್ನು ರದ್ದುಪಡಿಸಲು ಉಪ ವಿಭಾಗಾಧಿಕಾರಿಗಳ ಗಮನಕ್ಕೆ ತಂದಿದ್ದು, ಅದರಂತೆ ದಿನಾಂಕ : 21–09–2005 ರಂದು ಈ ಜಮೀನುಗಳನ್ನು ಉಪ ವಿಭಾಗಾಧಿಕಾರಿಗಳು ರದ್ದುಗೊಳಿಸಿ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ರೀತಿ ಕಾನೂನಿನ ತಪ್ಪು ಗ್ರಹಿಕೆಯಿಂದ ತಹಶೀಲ್ದಾರರು ಮಾಡಿದ ಆದೇಶವನ್ನು ಉಪ ವಿಭಾಗಾಧಿಕಾರಿಗಳು ರದ್ದುಪಡಿಸಿ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆದಿರುವುದರಿಂದ, ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಆದ್ದರಿಂದ, ಆಪಾದಿತರಾದ ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು ಹಾಲಿ ನಿವೃತ್ತರು ಇವರ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸಿ, ಇವರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ನು ಕೈಬಿಡಲು ಹಾಗೂ ಶ್ರೀ ಎಸ್.ವಿ. ದೇವದಾಸ, ಹಿಂದಿನ ಕಂ.ನಿ, ಮುಧೋಳ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತಂತೆ ವಾಗ್ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 11 ಎಡಿಇ 2006, ಬೆಂಗಳೂರು, ದಿನಾಂಕ: 26.03.2011

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಪಾದಿತರಾದ ಶ್ರೀ ಎಸ್.ಎಲ್. ಚಿಂಚಲಿ, ಹಿಂದಿನ ತಹಶೀಲ್ದಾರ್, ಮುಧೋಳ್ ತಾಲ್ಲೂಕು ಹಾಲಿ ನಿವೃತ್ತರು ಇವರ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸಿ, ಇವರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ ಮತ್ತು ಶ್ರೀ ಎಸ್.ವಿ. ದೇವದಾಸ, ಹಿಂದಿನ ಕಂ.ನಿ, ಮುಧೋಳ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತಂತೆ ಸದರಿಯವರಿಗೆ ವಾಗ್ದಂಡನೆ ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 989

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ(ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಟಿಪ್ಪಣಿ ಸಂ : ಮುಮಕಾ/1120/2011, ದಿನಾಂಕ : 04–03–2011.

ಪ್ರಸ್ತಾವನೆ:

ಮೇಲೆ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ನೆರೆ ಪೀಡಿತ ಗ್ರಾಮಗಳಲ್ಲಿ ಆಸರೆ ಯೋಜನೆಯಡಿ 11642 ಮನೆಗಳನ್ನು ನಿರ್ಮಿಸಲು ವಹಿಸಿದ್ದು, ಈ ಸಂಬಂಧವಾಗಿ ಅಂದಾಜು ಮೊತ್ತ ರೂ. 159.21 ಕೋಟಿಗಳಿದ್ದು, ಈಗಾಗಲೇ ರೂ. 100.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಈ ಸಂಬಂಧ ಸದರಿ ಸಂಸ್ಥೆಗೆ ರೂ. 20.00 ಕೋಟಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 174 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ: 26.03.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ., ಬೆಂಗಳೂರು ಇವರಿಗೆ ನೆರೆ ಪೀಡಿತ ಜಿಲ್ಲೆಗಳಲ್ಲಿ ಆಸರೆ ಯೋನೆಯಡಿ ಮನೆಗಳನ್ನು ನಿರ್ಮಾಣ ಮಾಡಲು ರೂ. 20.00 ಕೋಟಿಗಳ (ರೂಪಾಯಿ ಇಪ್ಪತ್ತು ಕೋಟಿಗಳು ಮಾತ್ರ) ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಸದರಿ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ **8235–00–111–0–02 "Public Contributions to Calamity Relief"** ಅಡಿಯಲ್ಲಿ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರು, ಅನುದಾನ ಬಿಲ್ (ಪೇಯೀಸ್ ರಿಸೀಟ್) ತಯಾರಿಸಿ, ಸರ್ಕಾರದ ಕಾರ್ಯದರ್ಶಿಗಳು, (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ ಇವರಿಂದ ಮೇಲು ಸಹಿ ಪಡೆದು, ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿಕೊಳ್ಳಲು ಆದೇಶಿಸಿದೆ. ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿಯೇ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ,. ಬೆಂಗಳೂರು ಇವರು ಈ ಹಿಂದೆ ಬಿಡುಗಡೆ ಮಾಡಿದ್ದ ಅನುದಾನಕ್ಕೆ ಹಾಗೂ ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳ ಟಿಪ್ಪಣಿ ಸಂ : ಮುಮಕಾ/1120/2011, ದಿನಾಂಕ : 04–03–2011, ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಪಿ.ಆರ್.990

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ(ವಿ.ನಿ. & ಸೇವೆಗಳು–2)

ಯುವಜನ ಸೇವಾ ಸಚಿವಾಲಯ

ವಿಷಯ : ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ ಯೋಜನೆಯಡಿ ಒದಗಿಸಬೇಕಾದ ಕ್ರೀಡಾ ಮೂಲಭೂತ ಸೌಕರ್ಯ ಕಾಮಗಾರಿಯನ್ನು ಸರ್ಕಾರದ ಅಧೀನ ನಿರ್ಮಾಣ ಸಂಸ್ಥೆಗೆ ವಹಿಸಿ ಕೊಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿವೈಎಎಸ್‌ಎಸ್/ಯೋ–2ಪೈಕಾ/ಅರ್ಜ/ಕಾರ್ಯ/ಅ/2010–11 ದಿನಾಂಕ : 28–01–2011.

ಪ್ರಸ್ತಾವನೆ:

ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು. ಅವರು ಮೇಲೆ ಓದಲಾದ ದಿನಾಂಕ : 28–01–2011 ಪತ್ರದಲ್ಲಿ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ ಒಂದು ಬಾರಿ ಅನುದಾನದಲ್ಲಿ ಕ್ರೀಡಾ ಪಟುಗಳ ಉಪಯೋಗಕ್ಕಾಗಿ ಆಟದ ಮೈದಾನ, ಕ್ರೀಡಾ ಸಲಕರಣೆ ಸಂಗ್ರಹಿಸಲು ದಾಸ್ತಾನು ಕೊಠಡಿ, ಬಟ್ಟೆ ಬದಲಾಯಿಸುವ ಕೊಠಡಿ, ಶೌಚಾಲಯ ಸೌಲಭ್ಯ ಇತ್ಯಾದಿಗಳ ನಿರ್ಮಾಣಕ್ಕಾಗಿ ಬಿಡುಗಡೆಯಾದ ಅನುದಾನಕ್ಕೆ ಉಪಯೋಗಿತಾ ಪತ್ರವನ್ನು ನೀಡುವಲ್ಲಿ ಹಲವು ತೊಡಕುಗಳು ಉದ್ಭವಿಸುತ್ತಿದ್ದು,

ಇವುಗಳನ್ನು ನಿವಾರಿಸುವ ಸಲುವಾಗಿ, ಈ ಸೌಲಭ್ಯಗಳನ್ನು ಕಲ್ಪಿಸುವ ಕಾಮಗಾರಿಗಳನ್ನು ಸರ್ಕಾರದ ಅಧೀನಕ್ಕೆ ಒಳಪಟ್ಟ ನಿರ್ಮಾಣ ಸಂಸ್ಥೆಗಳ ಮೂಲಕವೇ ಕೈಗೊಳ್ಳುವಂತೆ ನಿಗದಿಪಡಿಸುವಂತೆ ಕೋರಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ : ಯುಸೇಇ 39 ಯುಸೇಕ್ರೀ 2011, ಬೆಂಗಳೂರು, ದಿನಾಂಕ: 28.03.2011

ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿಯಲ್ಲಿ (ಪೈಕಾ) ಒಂದು ಬಾರಿ ಬಂಡವಾಳ ಅನುದಾನದಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳನ್ನು ಸರ್ಕಾರದ ಅಧೀನದಲ್ಲಿರುವ ಈ ಕೆಳಕಂಡ ನಿರ್ಮಾನ ಸಂಸ್ಥೆಗಳ ಮೂಲಕವೇ ಕೈಗೊಳ್ಳಬೇಕೆಂದು ಸರ್ಕಾರವು ಈ ಮೂಲಕ ಆದೇಶಿಸುತ್ತದೆ.

1. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ ನಿಯಮಿತ.
2. ಕರ್ನಾಟಕ ನಿರ್ಮಾಣ ನಿರ್ಮಿತ ಕೇಂದ್ರ.
3. ಲೋಕೋಪಯೋಗಿ ಇಲಾಖೆ.
4. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ.

ಮೇಲಿನಂತೆ ಸರ್ಕಾರದ ಅಧೀನದ ಏಜೆನ್ಸಿಗಳಿಗೆ ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ 1999 ಹಾಗೂ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಅಲ್ಲದೇ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್/ಬ್ಲಾಕ್ ಪಂಚಾಯತ್ ಮಟ್ಟದ ಪೈಕಾ ಕೇಂದ್ರಗಳಲ್ಲಿ ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ ಅನುದಾನವನ್ನು ಮೇಲಿನ ಸಂಸ್ಥೆಗಳಿಗೆ ಬಿಡುಗಡೆ ಮಾಡತಕ್ಕದ್ದು.

ಈ ರೀತಿ ಬಿಡುಗಡೆ ಆದ ಅನುದಾನವು ಸದ್ಬಳಕೆಯಾಗುವ ಉಸ್ತುವಾರಿ ನಿರ್ವಹಣೆಯನ್ನು ಬ್ಲಾಕ್ ಮಟ್ಟದ, ಹಾಗೂ ಜಿಲ್ಲಾ ಮಟ್ಟದ ಪೈಕಾ ಕಾರ್ಯಕಾರಿ ಸಮಿತಿಯ ಮಾರ್ಗದರ್ಶನ/ಉಸ್ತುವಾರಿಯಲ್ಲಿ ಕೈಗೊಳ್ಳತಕ್ಕದ್ದು.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಸಹಾಯಕ ನಿರ್ದೇಶಕರು ಹಂತಹಂತವಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಕಾರ್ಯವನ್ನು ನಿರ್ವಹಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಪಿ.ಆರ್.991

ಸರ್ಕಾರದ ಅಧೀನ ಕಾರ್ಯದರ್ಶಿ

ಯವಜನ ಸೇವಾ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : ಪ್ರಥಮ ವರ್ಷದ ಬಿ.ಇ./ಬಿ.ಟೆಕ್. ಮತ್ತು ಬಿ.ಆರ್ಕ್ ಕೋರ್ಸುಗಳ ಪ್ರವೇಶದ ಹಾಗೂ ಡಿಪ್ಲೊಮಾ ಕೋಟಾದ ಬಿ.ಇ. 2ನೇ ವರ್ಷದ/3ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರಸ್ಪರ ವರ್ಗಾವಣೆ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಡಿ 127 ಟಿಇಸಿ 96, ದಿನಾಂಕ : 21–05–1996.
2. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ : ಡಿಟಿಇ 157 ಎಸಿಎಂ (1) 2003, ದಿನಾಂಕ : 09–03–2004.
3. ಸರ್ಕಾರಿ ಆದೇಶ ಸಂಖ್ಯೆ : ಇಡಿ 59 ಟಿಇಸಿ 2004, ದಿನಾಂಕ : 31–12–2004.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ 19974 ಕರ್ನಾಟಕ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಯ ಉಪಬಂಧಗಳ ಅನುಸಾರ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಿ.ಇ./ಬಿ.ಟೆಕ್ ಮತ್ತು ಬಿ.ಆರ್ಕ್ ಕೋರ್ಸಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಯಾವ ಪ್ರವರ್ಗದ ಸೀಟಿಗೆ ಪ್ರವೇಶ ಪಡೆದಿರುತ್ತಾರೋ ಅದೇ ಪ್ರವರ್ಗದ ಸೀಟಿನಲ್ಲಿ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಪರಸ್ಪರ ವರ್ಗಾವಣೆ ಹೊಂದಲು ಅವಕಾಶ ಕಲ್ಪಿಸಲಾಗಿತ್ತು. ಅಂತಹ ಪರಸ್ಪರ ವರ್ಗಾವಣೆಗೆ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಲಾಗಿತ್ತು. ಮೇಲೆ ಓದಲಾದ (2)ರ ಪತ್ರದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದಿಂದ ಪ್ರವೇಶ ಪ್ರಕ್ರಿಯೆ ಮತ್ತು ಸಾಂದರ್ಭಿಕ ಸುತ್ತುಗಳು ಮುಗಿದ ನಂತರವೂ ತಮ್ಮ ಸೌಕರ್ಯಾನುಸಾರ ಸೀಟು ದೊರಕದ ವಿದ್ಯಾರ್ಥಿಗಳು ವಿಶೇಷತಹ ವಸತಿ ನಿಲಯ ಮುಂತಾದ ಸೌಕರ್ಯಗಳಿಗಾಗಿ ಪರಸ್ಪರ ವರ್ಗಾವಣೆಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಮಾನವೀಯ ಅನುಕಂಪದ ಮೇರೆಗೆ ಪರಸ್ಪರ ವರ್ಗಾವಣೆಗೆ ಅನುಮತಿಸುವುದು ಸೂಕ್ತವಾಗಿದೆ ಹಾಗೂ ಈ ಪರಸ್ಪರ ವರ್ಗಾವಣೆ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಯು ರೂ. 1,000/– ವರ್ಗಾವಣೆ ಶುಲ್ಕ ನಿಗದಿಗೊಳಿಸಿ ಹಲವು ಷರತ್ತುಗಳನ್ನು ವಿಧಿಸಿ ಪರಸ್ಪರ ವರ್ಗಾವಣೆಗೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದಿಂದ ಕೌನ್ಸಿಲಿಂಗ್ ಮೂಲಕ ಸರ್ಕಾರಿ/ಖಾಸಗಿ/ಅನುದಾನಿತ ಅಥವಾ ವಿಶ್ವವಿದ್ಯಾನಿಯಲಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಥಮ ಬಿ.ಇ./ಬಿ.ಟೆಕ್ ಮತ್ತು ಬಿ.ಆರ್ಕ್ ಕೋರ್ಸುಗಳ ಪ್ರವೇಶದ ಹಾಗೂ ಡಿಪ್ಲೊಮಾ ಕೋಟಾದ ಬಿ.ಇ. 2ನೇ ವರ್ಷದ/3ನೇ ಸೆಮಿಸ್ಟರ್ ಕೋರ್ಸುಗಳಿಗೆ ಪ್ರವೇಶ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುವಂತೆ ಒಂದು ಇಂಜಿನಿಯರಿಂಗ್ ಕಾಲೇಜಿನಿಂದ ಮತ್ತೊಂದು ಇಂಜಿನಿಯರಿಂಗ್ ಕಾಲೇಜಿಗೆ ಪರಸ್ಪರ

ವರ್ಗಾವಣೆಗೆ ಹಲವು ಸೂತ್ರಗಳಂತೆ ಅನುಮತಿಸಲಾಗಿತು. ಈ ಆದೇಶದಲ್ಲಿನ ಸೂತ್ರಗಳನ್ನು ಸಡಿಲಿಸಿ ರ್‍ಯಾಂಕ್ ಪರಸ್ಪರ ಪೂರಕವಾಗಿರದ, ಕೋರ್ಸು ಬದಲಾವಣೆಯಂತಹ ರಿಯಾಯಿತಿ ಸೀಟುಗಳಿಗೆ ಹೆಚ್ಚಿನ ಶುಲ್ಕದ ಅಥವಾ ಹೆಚ್ಚಿನ ಶುಲ್ಕದ ಸೀಟುಗಳಿಗೆ ರಿಯಾಯಿತಿ ಶುಲ್ಕದ ಸೀಟುಗಳಿಗೆ ಬದಲಾವಣೆ ಕೋರಿಕೆಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಸಲ್ಲಿಸುತ್ತಿರುವುದನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 206 ಟಿಇಸಿ 2010, ಬೆಂಗಳೂರು, ದಿನಾಂಕ: 28.03.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲಿ, ಸರ್ಕಾರಿ ಆದೇಶ ಸಂಖ್ಯೆ : ಇಡಿ 59 ಟಿಇಸಿ 2004, ದಿನಾಂಕ 31–12–2004ರ ಆದೇಶವನ್ನು ರದ್ದುಗೊಳಿಸಿದೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೌನ್ಸಿಲಿಂಗ್ ಮುಖಾಂತರ ಸರ್ಕಾರಿ/ಖಾಸಗಿ/ಅನುದಾನಿತ ಅಥವಾ ವಿಶ್ವವಿದ್ಯಾನಿಯಲಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಥವ ವರ್ಷದ ಬಿ.ಇ./ಬಿ.ಟೆಕ್ ಮತ್ತು ಬಿ.ಆರ್ಕ್ ಕೋರ್ಸುಗಳ ಪ್ರವೇಶದ ಹಾಗೂ ಡಿಪ್ಲೊಮಾ ಕೋಟಾದ ಬಿ.ಇ. 2ನೇ ವರ್ಷದ/3ನೇ ಸೆಮಿಸ್ಟರ್‌ಗೆ ಪ್ರವೇಶ ಹೊಂದಿನ ಅಭ್ಯರ್ಥಿಗಳು ಆಯಾಯಾ ಶೈಕ್ಷಣಿಕ ವರ್ಷದಲ್ಲಿ ಮಾತ್ರ ಅನ್ವಯಿಸುವಂತೆ ಒಂದು ಇಂಜಿನಿಯರಿಂಗ್ ಕಾಲೇಜಿನಿಂದ ಮತ್ತೊಂದು ಇಂಜಿನಿಯರಿಂಗ್ ಕಾಲೇಜಿಗೆ ಪರಸ್ಪರ ವರ್ಗಾವಣೆಯನ್ನು ಈ ಕೆಳಕಂಡ ಸೂತ್ರಗಳಂತೆ ಮಾಡಲು ಅನುಮತಿಸಲಾಗಿದೆ.

1. ಪರಸ್ಪರ ವರ್ಗಾವಣೆಗೆ ಅನುಸರಿಸಬೇಕಾದ ಮಾನದಂಡಗಳನ್ನು ಸಿ.ಇ.ಟಿ. ಕಿರುಹೊತ್ತಿಗೆಯಲ್ಲಿ ಪ್ರಕಟಿಸತಕ್ಕದ್ದು ಹಾಗೂ ಈ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡತಕ್ಕದ್ದು.
2. ಈ ಪರಸ್ಪರ ವರ್ಗಾವಣೆಯನ್ನು ಪ್ರವೇಶ ಸುತ್ತು ಮತ್ತು ಸಾಂದರ್ಭಿಕ ಸುತ್ತುಗಳು ಮುಗಿದ ನಂತರ ಒಂದು ಗಡುವನ್ನು ನಿಗದಿಪಡಿಸತಕ್ಕದ್ದು.
3. ಪರಸ್ಪರ ವರ್ಗಾವಣೆಯು ಸಂಬಂಧಪಟ್ಟ ಕೋರ್ಸುಗಳಿಗೆ (ಉದಾ : ಮೆಕ್ಯಾನಿಕಲ್ ಕೋರ್ಸಿನಿಂದ ಮೆಕ್ಯಾನಿಕಲ್ ಕೋರ್ಸಿಗೆ ಅದೇ ರೀತಿಯಾಗಿ ಆಯಾಯಾ ಕೋರ್ಸುಗಳಿಗೆ) ಮಾತ್ರ ಅನ್ವಯಿಸತಕ್ಕದ್ದು.
4. ಈ ಪರಸ್ಪರ ವರ್ಗಾವಣೆಯು ಆಯಾಯಾ ಪ್ರವರ್ಗದವರಿಗೆ ಮಾತ್ರ (ಉದಾ : ಪರಿಶಿಷ್ಟ ಜಾತಿಯಿಂದ ಪರಿಶಿಷ್ಟ ಜಾತಿಗೆ, ಅದೇ ರೀತಿಯಾಗಿ ಆಯಾಯಾ ವರ್ಗಗಳಿಗೆ) ಮಾತ್ರ ಅನ್ವಯಿಸತಕ್ಕದ್ದು.
5. ಪರಸ್ಪರ ವರ್ಗಾವಣೆಯು ರಿಯಾಯಿತಿ ಶುಲ್ಕದ ಸೀಟುಗಳಿಗೆ ರಿಯಾಯಿತಿ ಶುಲ್ಕದ ಸೀಟುಗಳನ್ನು, ಹೆಚ್ಚಿನ ಶುಲ್ಕದ ಸೀಟುಗಳಿಗೆ, ಹೆಚ್ಚಿನ ಶುಲ್ಕದ ಸೀಟುಗಳನ್ನು ಮಾತ್ರ ಬದಲಾವಣೆ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ರಿಯಾಯಿತಿ ಶುಲ್ಕದ ಸೀಟುಗಳನ್ನು ಹೆಚ್ಚಿನ ಶುಲ್ಕದ ಸೀಟುಗಳಿಗೆ ಅರ್ಜಿ ಸಲ್ಲಿಸತಕ್ಕದ್ದಲ್ಲ.
6. ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪೂರೈಸಿದ್ದು, ಪರಸ್ಪರ ವರ್ಗಾವಣೆ ಬಯಸುವ ಇಬ್ಬರು ಅಭ್ಯರ್ಥಿಗಳ ರ್‍ಯಾಂಕ್ ಅಂತರವು ಸಮೀಪದಲ್ಲಿರತಕ್ಕದ್ದು. ಯಾವುದೇ ಕಾರಣಕ್ಕೂ ಎರಡು ಸಾವಿರ ರ್‍ಯಾಂಕ್ ಅಂತರವನ್ನು ಮೀರತಕ್ಕದ್ದಲ್ಲ.
7. ಪರಸ್ಪರ ವರ್ಗಾವಣೆಗೆ ಸಂಬಂಧಪಟ್ಟ ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರ ಲಿಖಿತ ಸಮ್ಮತಿ ಇರತಕ್ಕದ್ದು.
8. ಈ ವರ್ಗಾವಣೆಗೆ ಕಾಲೇಜುಗಳು ಯಾವುದೇ ಶುಲ್ಕ ವಸೂಲು ಮಾಡುವಂತಿಲ್ಲ.
4. This order is issued in accordance with the concurrence of Finance Department given vide U.O. Note No. FD 611 Exp-1/2011 dated 31-03-2011.

By order and in the name of the Governor of Karnataka

C.A. Baburavindranath Patel

PR No. 1032

Under Secretary to Government,

Infrastructure Development Department

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಡಾ॥ ರುದ್ರೇಶ್. ಎಸ್. ಫಾಳಿ, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಕುಮಸಿ, ಗುಲ್ಬರ್ಗಾ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕುವ (Discharge) ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಆಪಸಂ/ಸಿಬ್ಬಂದಿ–2/ವಿವ–38/2010–11, ದಿನಾಂಕ 10–02–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಪಶುಚಿಕಿತ್ಸಾಲಯ, ಕುಮಸಿ, ಗುಲ್ಬರ್ಗಾ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇಲ್ಲಿ ಪಶುವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ॥ ರುದ್ರೇಶ್. ಎಸ್. ಫಾಳಿರವರು ದಿನಾಂಕ 03–07–2009 ರಿಂದ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರು ಸಹಾಯಕ ಆಯುಕ್ತರ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ ಪಶುವೈದ್ಯಾಧಿಕಾರಿ ಹುದ್ದೆಗೆ ದಿನಾಂಕ 06.08.2010 ರಿಂದ ಅನ್ವಯವಾಗುವಂತೆ ರಾಜೀನಾಮೆ ನೀಡಿ ಅಂಗೀಕರಿಸುವಂತೆ ಕೋರಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಹಾಗೂ ಬೇಬಾಕಿ ಇಲ್ಲದಿರುವ ಬಗ್ಗೆ ಸಂಬಂಧಪಟ್ಟ ಉಪ ನಿರ್ದೇಶಕರು ದೃಢೀಕರಿಸಿದ್ದು, ಆಯುಕ್ತಾಲಯದ ದಾಖಲಾತಿಯನ್ವಯ ಅಧಿಕಾರಿಯ ಮೇಲೆ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಡಾ॥ ರುದ್ರೇಶ್. ಎಸ್. ಫಾಳಿ, ಪಶುವೈದ್ಯಾಧಿಕಾರಿ ಇವರು ಸಹಾಯಕ ಆಯುಕ್ತರ ಹುದ್ದೆಗೆ ನೇಮಕಾತಿ ಬಯಸಿ ಇಲಾಖಾ ಮೂಲಕ ಅರ್ಜಿ ಸಲ್ಲಿಸಲು ಅನುಮತಿ ಪಡೆದಿರುವುದಿಲ್ಲವಾದ್ದರಿಂದ ಹಾಗೂ ಅವರು ಖಾಯಂ ಪೂರ್ವ ಸೇವಾವಧಿಯಲ್ಲಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) 1977ರ ನಿಯಮ 6ರನ್ವಯ ಸೇವೆಯಿಂದ ತೆಗೆದುಹಾಕುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

2. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಡಾ॥ ರುದ್ರೇಶ್. ಎಸ್. ಫಾಳಿ, ಪಶುವೈದ್ಯಾಧಿಕಾರಿ ಇವರು ದಿನಾಂಕ 03–07–2009 ರಿಂದ ಕಾರ್ಯನಿರ್ವಹಿಸುತ್ತಿದ್ದು, ಪರೀಕ್ಷಾರ್ಥ ಅವಧಿ ಘೋಷಣೆಯಾಗಿರುವುದಿಲ್ಲ. ಸದರಿ ಅಧಿಕಾರಿಯು ಕೆ.ಎ.ಎಸ್. ಗ್ರೂಪ್–ಎ (ಕಿರಿಯ ಶ್ರೇಣಿ) ವೃಂದದ ಸಹಾಯಕ ಆಯುಕ್ತರ ಹುದ್ದೆಗೆ ನೇಮಕಾತಿ ಹೊಂದಿದ್ದು, ಆ ಹುದ್ದೆಗೆ ಸಕ್ಷಮ ಪ್ರಾಧಿಕಾರದ ಅನುಮತಿಯೊಂದಿಗೆ ಇಲಾಖೆ ಮುಖಾಂತರ ಅರ್ಜಿಯನ್ನು ಸಲ್ಲಿಸದೇ ನೇರವಾಗಿ ಅರ್ಜಿ ಸಲ್ಲಿಸಿರುತ್ತಾರೆ. ಸಹಾಯಕ ಆಯುಕ್ತರ ಹುದ್ದೆಯಲ್ಲಿ ಹಾಜರಾಗಲು ಅವಕಾಶವಾಗುವಂತೆ ಪಶುವೈದ್ಯಾಧಿಕಾರಿ ಹುದ್ದೆಗೆ ದಿನಾಂಕ 06–08–2010 ರಂದು ರಾಜೀನಾಮೆ ನೀಡಿ, ಸದರಿ ದಿನಾಂಕದಿಂದಲೇ ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ. ಅಧಿಕಾರಿಯ ಮೇಲೆ ಯಾವುದೇ ಇಲಾಖಾ ವಿಚಾರಣೆ ಇರುವುದಿಲ್ಲ ಹಾಗೂ ಅವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಯಾವುದೂ ಇರುವುದಿಲ್ಲ. ಖಾಯಂ ಪೂರ್ವ ಸೇವಾವಧಿಯಲ್ಲಿರುವುದರಿಂದ ಸದರಿ ಅಧಿಕಾರಿಯನ್ನು ಸೇವೆಯಿಂದ ತೆಗೆದುಹಾಕುವಂತೆ ಆಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಡಾ॥ ರುದ್ರೇಶ್. ಎಸ್. ಫಾಳಿ ರವರು ಪರೀಕ್ಷಾರ್ಥ ಅವಧಿಯಲ್ಲಿರುವಾಗಲೇ ಇಲಾಖೆಯನ್ನು ಬಿಡಲು ಉದ್ದೇಶಿಸಿರುವುದರಿಂದ ಹಾಗೂ ಪ್ರಸ್ತುತ ನೇಮಕಾತಿ ಹೊಂದಿರುವ ಸಹಾಯಕ ಆಯುಕ್ತರ ಹುದ್ದೆಗೆ ಇಲಾಖೆಯ ಅನುಮತಿ ಪಡೆಯದೇ ನೇರವಾಗಿ ಅರ್ಜಿ ಸಲ್ಲಿಸಿರುವುದರಿಂದ ಅವರು ಪಶುವೈದ್ಯಾಧಿಕಾರಿ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸುವ ಬದಲು ಆಯುಕ್ತರ ಶಿಫಾರಸ್ಸಿನಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕುವುದು ಸೂಕ್ತವೆಂದು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 49 ಪಸಸೇ 2011, ಬೆಂಗಳೂರು, ದಿನಾಂಕ 28ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ರುದ್ರೇಶ್. ಎಸ್. ಫಾಳಿ, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಕುಮಸಿ, ಗುಲ್ಬರ್ಗಾ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರು ಪರೀಕ್ಷಾರ್ಥ ಅವಧಿಯಲ್ಲಿರುವಾಗಲೇ ಪಶುವೈದ್ಯಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿದ್ದು ಅವರ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗದಿರುವುದರಿಂದ ಹಾಗೂ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಮತ್ತೊಂದು ಹುದ್ದೆಗೆ

ನೇರವಾಗಿ ಅರ್ಜಿ ಸಲ್ಲಿಸಿ ನೇಮಕಾತಿ ಹೊಂದಿರುವುದರಿಂದ, ಇಲಾಖಾ ಆಯುಕ್ತರ ಶಿಫಾರಸ್ಸನ್ನು ಅನುಸರಿಸಿ ಸದರಿ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 6(1)ರನ್ವಯ ಸರ್ಕಾರಿ ಸೇವೆಯಿಂದ ತೆಗೆದುಹಾಕಿ (Discharge) ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಪಿ. ನಾಗರಾಜ,
ಪೀಠಾಧಿಕಾರಿ–2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಪಶುಸಂಗೋಪನೆ–ಎ).

ಪಿ.ಆರ್. 1033

HORTICULTURE SECRETARIAT

Sub: Release of State share for National Horticulture Mission (NHM) programme during 2010-11 – reg.

Read: 1. Finance Department G.O. No. FD 439 BRS 2010, dated 30-03-2011.

2. Letter of Director of Horticulture No. ತೋಇ/ಯೋ/ಸತೋಅ– 1/30/2010-11, dated 29.03.2011.

Preamble:

Finance Department has accorded sanction for reappropriation of sum of Rs.111.38 lakhs under the major Head of Account 2401- Horticulture Department – 00-800-2-30-059 (P) vide Government Order read at (1) above.

This is to be released to the Director of Horticulture and hence this order.

GOVERNMENT ORDER NO.: HCD 32 HPP 2010, BANGALORE, DATED: 31-03-2011

Government is pleased to release to the Director of Horticulture an amount of Rs.111.38 lakhs (Rupees One Hundred and Eleven Lakhs and Thirty Eight Thousand only) under the Head of Account 2401-00-800-2-30-059 (P) towards the matching State share for implementation of National Horticulture Mission programme during 2010-11.

2. This order is issued in concurrence with the Government Order No. FD 439 BRS 2010 dated 30.03.2011 of the Finance Department.

By Order and in the name of the Governor of Karnataka
B.C. PRAKASH,
Under Secretary to Government,
Horticulture Department.

PR No. 1034

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ತಿದ್ದುಪಡಿ

ಸಂ : ಅಪಜೀ 267 ಎಫ್ಎಪಿ 2010, ಬೆಂಗಳೂರು, ದಿನಾಂಕ 19–03–2011

ಪರಿಹಾರಾತ್ಮಕ ನೆಡುತೋಪುಗಳ ದರ ಪರಿಷ್ಕರಣೆ ಕುರಿತಂತೆ ದಿನಾಂಕ 25–02–2011 ರಲ್ಲಿ ಹೊರಡಿಸಲಾದ ಆದೇಶದ ಪ್ರಸ್ತಾವನೆಯ ನಂತರ ಪ್ರಾರಂಭವಾಗುವ **"**ಸರ್ಕಾರಿ ಆದೇಶ ಸಂಖ್ಯೆ ಅಪಜೀ 267 ಎಫ್ಎಪಿ 2009**"** ಎಂಬುದಕ್ಕೆ ಬದಲಾಗಿ **"**ಅಪಜೀ 267 ಎಫ್ಎಪಿ 2010**'** ಎಂಬುದಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಪಿ. ಪಾಟೀಲ,
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 1035

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub: Approval for change of location and allotment of land for the Project proposal of M/s. Comat Technologies (P) Ltd to establish "Software Development and BPO Centre" project from Kadubeesanahalli Village, Varthur Hobli, Bangalore South Taluk to Devanahalli KIADB Industrial Area. (5 Acres of land) post facto approval.

Read: Proceedings of the 24th State High Level Clearance Committee (SHLCC) meeting held on 24-01-2011.

Preamble:

M/s. Comat Technologies (P) Ltd. has proposed to establish "Software Development and BPO Centre" project at Kadubeesanahalli Village, Varthur Hobli, Bangalore South Taluk with an investment of Rs.69.25 Crores as approved by the SHLCC in its meeting held on 24-01-2004. The Committee recommended KIADB to acquire and allot 11 Acres, 35 Guntas as a

"Single Unit Complex" at survey No. 15 & 17/1 (part measuring about 35 Guntas on western side of road, adjacent to Sy. No. 15) of Kadubeesanahalli Village, Varthur Hobli.

The company in its representation dated 25-08-2010 to the Secretariat C&I Department, requested for change of location and allotment of land for the project from Kadubeesanahalli Village, Varthur Hobli, Bangalore South Taluk to Devanahalli KIADB Industrial Area, as the land proposal earlier by the unit could not be acquired by KIADB because of technical reasons. C&I Department has have accord approval for allotment of 5 acres of land by KIADB in Devanahalli Industrial Area Bangalore for establishment of the above project vide GO No : CI 436 SPI 2010 Dated 26-08-2010.

In the proposal submitted for the 24th State High Level Clearance Committee (SHLCC) meeting held on 24-01-2011, the Committee noted the contents as above and ratified the action taken by the C&I Department for allotment of 5 Acres of land by KIADB in Devanahalli Industrial Area Bangalore.

Hence the following amended order :

GOVERNMENT ORDER NO.: ITD 03 MDA 2011 (8), BANGALORE, DATED: 25-03-2011

In the circumstances explained in the Preamble, Government are pleased to accord approval for change of location of the project proposal of M/s. Comat Technologies (P) Ltd to establish "Software Development and BPO Centre" project from Kadubeesanahalli Village, Varthur Hobli, Bangalore South taluk to Devanahalli KIADB Industrial Area and allotment of 5 Acres of land by KIADB in Devanahalli Industrial Area.

By Order and in the name of the Governor of Karnataka

K. BORLINGAIAH,

Under Secretary to Government (I/c),

Information Technology, Bio Technology and

Science and Technology Department.

PR No. 1036

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎ.ಸಿ. ಲೋಕೇಶ, ಪಿ.ಎಸ್.ಐ. ಕೆಸ್ತೂರು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (1)/04/2008–09, ದಿನಾಂಕ 08.07.2010 (ಓ.ಬಿ. 14/2010–11).
2. ಅರ್ಜಿದಾರರ ಮೇಲ್ಮನವಿ ಅರ್ಜಿ ದಿನಾಂಕ 28–8–2010.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (1)/04/2008–09, ದಿನಾಂಕ 19–10–2010.

ಪ್ರಸ್ತಾವನೆ :

ಶ್ರೀ ಎ.ಸಿ. ಲೋಕೇಶ, ಪಿ.ಎಸ್.ಐ. ಇವರು, ಮಂಡ್ಯ ಜಿಲ್ಲೆ ಕೆರೆಗೋಡು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ, ಬೇಜವಾಬ್ದಾರಿತನ ಹಾಗೂ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ನಿಬ್ಬರು ಸಿಬ್ಬಂದಿಗಳೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

<u>ದೋಷಾರೋಪಣೆ</u>

1) ಆ.ಪೊ.ಅ.–1 ಆದ ನೀವು ಈ ಹಿಂದೆ ಕೆರೆಗೋಡು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ಸಮಯದಲ್ಲಿ ಅಂದರೆ ದಿನಾಂಕ 28–8–2007 ರಲ್ಲಿ ಮೊ.ನಂ. 118/08 ಕಲಂ ಹೆಂಗಸು ಕಾಣೆಯಾಗಿದ್ದಾಳೆ ಎಂದು ಪ್ರಕರಣವನ್ನು ದಾಖಲು ಮಾಡಿರುತ್ತೀರಿ. ನೀವು ಒಬ್ಬ ಜವಾಬ್ದಾರಿಯುತ ತನಿಖಾಧಿಕಾರಿಯಾಗಿ ಸದರಿ ಪ್ರಕರಣದಲ್ಲಿ ಕ್ರಮಬದ್ಧ ತನಿಖೆಯನ್ನು ನಡೆಸದೆ ಕಾಣೆಯಾದ ಹೆಂಗಸನ್ನು ಪತ್ತೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳದೇ ಕರ್ತವ್ಯದಲ್ಲಿ ಅತೀವವಾದ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರಿ.
2) ಈ ಪ್ರಕರಣದ ಫಿರ್ಯಾದುದಾರರಾದ ಶ್ರೀ ಭಕ್ತೇಶ್ ರವರು ಕಾಣೆಯಾಗಿದ್ದ ಹೆಂಗಸನ್ನು ರಾಯಶೆಟ್ಟಿಪುರ ಗ್ರಾಮದ ವಾಸಿ ಶ್ರೀ ಆರ್.ಎಂ. ಮಂಜುನಾಥ ಎಂಬುವವರು ಕರೆದುಕೊಂಡು ಹೋಗಿ ಬೆಂಗಳೂರಿನಲ್ಲಿ ಬಚ್ಚಿಟ್ಟುಕೊಂಡಿರುತ್ತಾರೆ, ಪತ್ತೆ ಮಾಡಿಕೊಡಿ ಎಂದು ಕೋರಿದ್ದು, ತನಿಖಾಧಿಕಾರಿಯಾದ ನೀವು ಈ ಬಗ್ಗೆ ಫಿರ್ಯಾದುದಾರ ಮರು–ಹೇಳಿಕೆಯನ್ನು ಮಾಡಿಕೊಂಡು ಸದರಿ ಪ್ರಕರಣದ ಕಲಂ ಅನ್ನು ಅಪಹರಣದ ಪ್ರಕರಣಕ್ಕೆ ಪರಿವರ್ತಿಸಿ ಮುಂದಿನ ತನಿಖೆಯನ್ನು ಕೈಗೊಳ್ಳದೆ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಕರ್ತವ್ಯ ಲೋಪವನ್ನೆಸಗಿರುತ್ತೀರಿ.
3) ನೀವು ನಿಮ್ಮ ಠಾಣಾ ಸಿಬ್ಬಂದಿ ಹಾಗೂ ಜೀಪ್ ಚಾಲಕನಾದ ಆ.ಪೊ.ಅ.–3 ಶ್ರೀ ಎಂ.ಪಿ. ಮಂಜುನಾಥ, ಸಿಪಿಸಿ 27 ಮತ್ತು ಶ್ರೀ ಟಿ.ಸಿ. ಅಪ್ಪಾಜಿ, ಎ.ಎಸ್.ಐ., ರವರುಗಳ ಮೂಲಕ ಈ ಪ್ರಕರಣದ ಫಿರ್ಯಾದುದಾರರಾದ ಶ್ರೀ ಭಕ್ತೇಶ್ ರವರಿಂದ ಲಂಚದ ಹಣವನ್ನು ವಸೂಲು ಮಾಡಿಸಿದ್ದು ಆ ಮೂಲಕ ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾದ ನೀವು ಅತೀವವಾದ ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಇವರ ವಿರುದ್ಧದ ಮೂರು ಆರೋಪಗಳಲ್ಲಿ ಎರಡನೇ ಆರೋಪ ಸಾಬೀತಾಗಿರುತ್ತದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 08–07–2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಸಮರ್ಥನೀಯ ಅಂಶಗಳು ಇಲ್ಲದಿರುವುದರಿಂದ ಹಾಗೂ ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 141 ಪೊಸಿಅ 2010, ಬೆಂಗಳೂರು, ದಿನಾಂಕ 05ನೇ ಏಪ್ರಿಲ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ.ಸಿ. ಲೋಕೇಶ, ಪಿ.ಎಸ್.ಐ. ಕೆಸ್ತೂರು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಪಿ.ಆರ್. 1037 ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ನಂಜುಂಡ, ಪಿ.ಐ. ಅಶೋಕಪುರಂ ಪೊಲೀಸ್ ಠಾಣೆ, ಮೈಸೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ (ಆಡಳಿತ) ಪ್ರಧಾನ ಕಛೇರಿ, ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿಬಿ (8)/87/2007–08, ದಿನಾಂಕ 5.10.2009.
2. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 15–02–2010.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ (8)/87/2007–08, ದಿನಾಂಕ 13–08–2010.

ಪ್ರಸ್ತಾವನೆ :

ಶ್ರೀ ನಂಜುಂಡ, ಪಿ.ಐ ಇವರು, ಈ ಹಿಂದೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಚ್ಯುತಿ, ದುರ್ನಡತೆ ಹಾಗೂ ನಿರ್ಲಕ್ಷತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

<u>ದೋಷಾರೋಪಣೆ</u>

"ಶ್ರೀ ನಂಜುಂಡ, ಪಿ.ಐ. ಕುವೆಂಪು ನಗರ ಪೊಲೀಸ್ ಠಾಣೆ, ಮೈಸೂರು ನಗರ ಆದ ನೀವು ಈ ಹಿಂದೆ ಸಿ.ಪಿ.ಐ. ಯಾಗಿ ಪಿರಿಯಾಪಟ್ಟಣ ಪೊಲೀಸ್ ಠಾಣೆಯ ಮೈಸೂರು ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀ ಬಸಪ್ಪನವರ ಮಗಳಾದ ಶ್ರೀಮತಿ ಸರ್ವಮಂಗಳ ರವರು ಅಂಬಲರೆ ಹಳ್ಳಿಯಲ್ಲಿ ಹೊಂದಿರುವ ಜಮೀನು ಸರ್ವೆ ನಂ. "30/329ಎ1"ಗೆ ಸಂಬಂಧಿಸಿದಂತೆ ಪಿರಿಯಾಪಟ್ಟಣದ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಎದುರುದಾರರಾದ ಶ್ರೀಮತಿ ಜಯಮ್ಮ ಇತರರ ವಿರುದ್ಧ ದಾವೆ ಸಂ : ಓಎಸ್ 124/2004 ರಲ್ಲಿ ಹೂಡಿದ್ದು, ಈ ಸಂಬಂಧ ನ್ಯಾಯಾಲಯವು ತಾತ್ಕಾಲಿಕ ಇಂಜಕ್ಷನ್ ಆದೇಶ ನೀಡಿ, ಸದರಿ ಜಮೀನಿನಲ್ಲಿ ಎದುರುದಾರರಿಂದ ಅತಿಕ್ರಮಣ ಪ್ರವೇಶ ನಿಷೇಧಿಸಿ ಪೊಲೀಸರ ಸಹಾಯ ಮತ್ತು ರಕ್ಷಣೆ ನೀಡುವಂತೆ ನಿರ್ದೇಶಿಸಿರುತ್ತದೆ. ನ್ಯಾಯಾಲಯದ ನಿರ್ದೇಶನದ ಬಗ್ಗೆ ಮಾಹಿತಿ ತಮಗೆ ಲಭ್ಯವಿದ್ದರೂ, ಸದರಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಬಾಕಿಯಿದ್ದು ಈ ಸಂಬಂಧ ಮಧ್ಯೆ ಪ್ರವೇಶಿಸಿ ಜಮೀನಿನ ಇತ್ಯರ್ಥತೆ ಬಗ್ಗೆ ತನಿಖೆ ನಡೆಸಿರುತ್ತೀರಿ. ನ್ಯಾಯಾಲಯದ ನಿಂದನೆಗೆ ಒಳಪಡುವಂತೆ ವರ್ತಿಸಿ ಕರ್ತವ್ಯ ಲೋಪವೆಸಗಿರುತ್ತೀರಿ. ಈ ಪ್ರಕರಣದಲ್ಲಿ ಅರ್ಜಿದಾರರು ತಮಗೆ ದೂರು ನೀಡಿದ್ದರೂ ಸಹ ತಾವು ಎದುರುದಾರರೊಂದಿಗೆ ಷಾಮೀಲಾಗಿ, ಯಾವುದೇ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳದೇ, ಅರ್ಜಿದಾರರನ್ನು ಮುಗಿಸುವ ಯೋಜನೆ ಬಗ್ಗೆ ತಾವು ಪರೋಕ್ಷವಾಗಿ ಎದುರುದಾರರಿಗೆ ಬೆಂಬಲ ನೀಡಿರುತ್ತೀರಿ. ಇದನ್ನು ಅರಿತ ಅರ್ಜಿದಾರರು ತಮ್ಮ ಹಳ್ಳಿಯನ್ನು ಬಿಟ್ಟು ಬೇರೆ ಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಇಂತಹ ಸಮಯದಲ್ಲಿ ಎದುರುದಾರರು, ಸದರಿ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ, ಜಮೀನಿನಲ್ಲಿ ಬೆಳೆದ ಅಲಸಂದಿ ಬೆಳೆಯನ್ನು ತೆಗೆದುಕೊಳ್ಳಲು ಕಾರಣರಾಗಿರುತ್ತೀರಿ ಮತ್ತು ಅರ್ಜಿದಾರರಿಗೆ ಸಹಾಯ/ರಕ್ಷಣೆ ನೀಡುವ ಬದಲು ಅವರಿಗೆ ಮಾನಸಿಕವಾಗಿ ತೊಂದರೆಕೊಟ್ಟು ಎದುರುದಾರರ ವಿರುದ್ಧ ಕಾನೂನು ರೀತ್ಯಾ ಪ್ರಕರಣ ದಾಖಲು ಮಾಡದೆ, ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡುವ ಮೂಲಕ ನೀವು ಕರ್ತವ್ಯದಲ್ಲಿ ಕರ್ತವ್ಯಚ್ಯುತಿ, ದುರ್ನಡತೆ, ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜನರಲ್ ಆಫ್ ಪೊಲೀಸ್ (ಆಡಳಿತ) ಪ್ರಧಾನ ಕಛೇರಿ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 05–10–2009ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷದವರೆಗೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಅಂಶಗಳು ಕಂಡುಬರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 35 ಪೊಸಿಅ 2010, ಬೆಂಗಳೂರು, ದಿನಾಂಕ 06ನೇ ಏಪ್ರಿಲ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನಂಜುಂಡ, ಪಿ.ಐ. ಅಶೋಕಪುರಂ ಪೊಲೀಸ್ ಠಾಣೆ, ಮೈಸೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1038

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಡಿ.ಎಸ್. ಅಶೋಕ್‌ಕುಮಾರ್, ಪಿ.ಐ. ವಾಡಿ ರೈಲ್ವೆ ವೃತ್ತ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ರೈಲ್ವೇಸ್, ಬೆಂಗಳೂರು, ಇವರ ಆದೇಶ ಸಂಖ್ಯೆ : ಡಿಇ/70/ಐಜಿಪಿ/ಆರ್‌ಎಲ್‌ವೈಎಸ್/2009–10, ದಿನಾಂಕ 15.9.2009.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ ಸಿಬಿ (8)/113/2009–10, ದಿನಾಂಕ 01–04–2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 18–06–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ (8)/113/2009–10, ದಿನಾಂಕ 20–11–2010.

ಪ್ರಸ್ತಾವನೆ :

ಶ್ರೀ ಡಿ.ಎಸ್. ಅಶೋಕ್‌ಕುಮಾರ್, ಪಿ.ಐ. ಇವರು ವಾಡಿ ರೈಲ್ವೆ ವೃತ್ತದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ನಿರ್ಲಕ್ಷತೆ ಹಾಗೂ ಕರ್ತವ್ಯಲೋಪವೆಸಗಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ

"You Sri B.M. Ashok Kumar are working as Police Inspector Wadi Railway Circle since 15-9-2008. The Superintendent of Police in his report No. CRM/61/09, dated 27-7-2009 has pointed out many serious omissions and commissions in your investigation in Wadi P.S. Crime No. 58/2008/ U/s 302 IPC Crime No. 65/2008 U/s 302, 201 IPC and Crime No. 88/2008 U/s 302, 210 IPC.

1. In Wadi RPS Crime No. 65/2008 where in the body of the Un-identified deceased was found on the Railway track, you have not even circulated the physical description of the deceased in the Andhra Pradesh and Maharashtra.
2. The particulars of deceased including photographs have not been sent to the criminal intelligence Bureau for publication.
    1. In Wadi P.S. Crime No. 88/2008 U/s 302, 201 IPC you have not obtained signature of the panchas, you have not been requested the medical officer to store the body atleast two to four days as the identity of the deceased was not known
    1. On receipt of the postmortem report you have not even bothered to go through the same in detail. In Wadi RPS Crime No. 58/2008 U/s 302 IPC you have not even subjected the clothes of the deceased (clothes for serological examination) as she died due to hit by a heavy weapon on her head.
    2. You have not requested medical officer to preserve the viscera.
    3. You have not even requested for publication of the photo of the deceased and physical feature of the deceased in the crime intelligence gazette.
    4. Although postmortem was conducted on the deceased on 04-8-2008, till this date you have not collected the postmortem report."

Therefore, all these points clearly shows that you are slip shod in your investigation and not serious in your professional work.

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ರೈಲ್ವೇಸ್, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 15.9.2009ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು 3 ವರ್ಷಗಳ ಕಾಲ ತದನಂತರದ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ್ದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 01–04–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ, ಹಾಗೂ ಕರ್ತವ್ಯಲೋಪವೆಸಗಿರುವುದು ದೃಢಪಟ್ಟಿರುವುದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಒಇ 101 ಪೊಸಿಅ 2010, ಬೆಂಗಳೂರು, ದಿನಾಂಕ 06ನೇ ಏಪ್ರಿಲ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ.ಎಸ್. ಅಶೋಕ್‌ಕುಮಾರ್, ಪಿ.ಐ. ವಾಡಿ ರೈಲ್ವೆ ವೃತ್ತ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1039

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಶಿವಲಿಂಗ ಕೆ. ಸಿ.ಪಿ.ಸಿ. ಕೆರೆಗೋಡು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿಯ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ (2)/ಡಿಇ/12/2009–10, (ಓ.ಬಿ. 419/2009–10), ದಿನಾಂಕ 31.3.2010.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ : ಅಪೀಲು/7/2010–11, ಓ.ಬಿ. 08/2010–11, ದಿನಾಂಕ 19.6.2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 21–07–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)/40/2010–11, ದಿನಾಂಕ 05–10–2010.

ಪ್ರಸ್ತಾವನೆ :

ಶ್ರೀ ಶಿವಲಿಂಗ, ಕೆ. ಸಿ.ಪಿ.ಸಿ. ಕೆರೆಗೋಡು ಪೊಲೀಸ್ ಠಾಣೆ, ಮಂಡ್ಯ ಇವರು ಮಳವಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ದುರ್ವರ್ತನೆ, ಅವಿಧೇಯತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ

"ಶ್ರೀ ಶಿವಲಿಂಗ ಕೆ. ಸಿ.ಪಿ.ಸಿ.–149 ಮಳವಳ್ಳಿಪುರ ಪೊಲೀಸ್ ಠಾಣೆ (ಹಾಲಿ ಅಮಾನತ್ತು) ಆದ ನೀವು ದಿನಾಂಕ 06–8–09 ರಂದು ರಾತ್ರಿ ಗಸ್ತಿನ ಕರ್ತವ್ಯಕ್ಕೆ ನೇಮಿಸಿದ್ದು, ಹಾಜರಾತಿ ಸಮಯದಲ್ಲಿ ನೀವು ಕರ್ತವ್ಯದ ಮೇಲಿದ್ದಾಗ ಮದ್ಯಪಾನ ಮಾಡಿದ್ದು, ಸಮವಸ್ತ್ರವನ್ನು ಸರಿಯಾಗಿ ಧರಿಸಿಲ್ಲದ ಕಾರಣ ಸರಿಪಡಿಸಿಕೊಳ್ಳುವಂತೆ ಪೊಲೀಸ್ ಇನ್‌ಸ್ಪೆಕ್ಟರ್, ಮಳವಳ್ಳಿಪುರ ಠಾಣೆ ರವರು ಸೂಚಿಸಿದಾಗ ಆಗುವುದಿಲ್ಲವೆಂದು ಎದುರುತ್ತರ ನೀಡಿ ಅವಿಧೇಯತೆ, ದುರ್ನಡತೆಯನ್ನು ತೋರಿದ್ದು, ನೀವು ಮದ್ಯಪಾನ ಸೇವಿಸಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿರುತ್ತದೆ. ನೀವು ಒಬ್ಬ ಜವಾಬ್ದಾರಿಯುತ ಪೊಲೀಸ್ ಸಿಬ್ಬಂದಿಯಾಗಿದ್ದು, ನಡತೆ ನಿಯಮಗಳನ್ನು ಉಲ್ಲಂಘಿಸಿ ನಿಮ್ಮ ಕರ್ತವ್ಯದಲ್ಲಿ ಅತೀವ ದುರ್ವರ್ತನೆ ಅವಿಧೇಯತೆ ಮತ್ತು ಬೇಜವಾಬ್ದಾರಿಯನ್ನು ತೋರಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ಇವರ ವಿರುದ್ಧದ ಆರೋಪವು ಭಾಗಶಃ ಸಾಬೀತಾಗಿದೆ ಎಂದು ವಿಚಾರಣಾಧಿಕಾರಿಗಳು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 31–03–2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರುವಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ ಹಾಗೂ ದಿನಾಂಕ 07–8–09 ರಿಂದ 15–9–09ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ್ದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 19–6–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಇವರ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಅವಿಧೇಯತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 124 ಪೊಸಿಅ 2010, ಬೆಂಗಳೂರು, ದಿನಾಂಕ 05ನೇ ಏಪ್ರಿಲ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಶಿವಲಿಂಗ ಕೆ. ಸಿ.ಪಿ.ಸಿ. ಕೆರೆಗೋಡು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1040

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ನಾರಾಯಣ ರೆಡ್ಡಿ, ಎ.ಪಿ.ಸಿ–37, ಡಿ.ಎ.ಆರ್. ಕೆ.ಜಿ.ಎಫ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿಯ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರ ಆದೇಶ ಸಂಖ್ಯೆ : ಸಿಬ್ಬಂದಿ(2)/ಶಿಕ್ಷೆ/10/2008 (ಓ.ಬಿ. : 270/2008) ದಿನಾಂಕ : 14–11–2008.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು 80/ಫನ್ಸಿ/2009–10 (ಓ.ಬಿ. 18/2009–10) ದಿನಾಂಕ : 8–10–2009.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 12–1–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)/79/2009–10, ದಿನಾಂಕ : 1–9–2010.

ಪ್ರಸ್ತಾವನೆ :

ಶ್ರೀ ನಾರಾಯಣ ರೆಡ್ಡಿ, ಎ.ಪಿ.ಸಿ–37, ಡಿ.ಎ.ಆರ್. ಕೆ.ಜಿ.ಎಫ್. ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತನ, ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ದಿನಾಂಕ : 13–8–2008 ರಂದು ಬೆಳಿಗ್ಗೆ ಪೊಲೀಸ್ ಅಧೀಕ್ಷಕರವರ ಅಂಗರಕ್ಷಕ ಕರ್ತವ್ಯಕ್ಕೆ ನೇಮಿಸಿದ್ದು, ನೀವು ನೇಮಿಸಿದ ಕರ್ತವ್ಯಕ್ಕೆ ಹೋಗದೆ ಗೈರುಹಾಜರಾಗಿ ಮೇಲಧಿಕಾರಿಗಳ ಆದೇಶವನ್ನು ಪಾಲಿಸದೆ ತಿರಸ್ಕರಿಸಿ ಅತೀವ ನಿರ್ಲಕ್ಷ್ಯತನ, ಅಶಿಸ್ತು ಮತ್ತು ದುರ್ನಡತೆಯನ್ನು ಪ್ರದರ್ಶಿಸಿ ಕರ್ತವ್ಯ ಲೋಪವೆಸಗಿರುತ್ತೀರಿ"

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 14–11–2008ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 8–10–09 ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 20 ಪೊಸಿಅ 2010, ಬೆಂಗಳೂರು, ದಿನಾಂಕ : 5–4–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನಾರಾಯಣ ರೆಡ್ಡಿ, ಎ.ಪಿ.ಸಿ.–37, ಡಿ.ಎ.ಆರ್. ಕೆ.ಜಿ.ಎಫ್. ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1041

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಕಾಮಗಾರಿಗಳ ಗುಣಮಟ್ಟ ನಿಯಂತ್ರಣ ಕಾರ್ಯಪಡೆ ರಚಿಸುವ ಬಗ್ಗೆ

ಓದಲಾಗಿದೆ: ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ಸಂಖ್ಯೆ: ಪಿಎಸ್ ಸಿಎಂ/3556/2008 ದಿನಾಂಕ: 28–10–2008.

ಪ್ರಸ್ತಾವನೆ :

ಮೇಲೆ ಓದಲಾದ ಟಿಪ್ಪಣಿಯಲ್ಲಿ ಡಾ॥ ಸಿ. ಎಸ್. ವಿಶ್ವನಾಥ್, ಅಧ್ಯಕ್ಷರು, ಟಾರ್‌ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಇವರ ಅಧ್ಯಕ್ಷತೆಯಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಕಾಮಗಾರಿಗಳ ಗುಣಮಟ್ಟ ನಿಯಂತ್ರಣ ಕಾರ್ಯಪಡೆಯನ್ನು ರಚಿಸಲು ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುತ್ತಾರೆ.

ಕ್ರಮ ಸಂಖ್ಯೆ	ಸದಸ್ಯರ ಹೆಸರು	ಹುದ್ದೆ
1.	ಡಾ॥ ಸಿ. ಎಸ್. ವಿಶ್ವನಾಥ್, ಅಧ್ಯಕ್ಷರು, ಟಾರ್ ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಬೆಂಗಳೂರು	ಅಧ್ಯಕ್ಷರು
2.	ಪ್ರೊ॥ ಸಿ.ಇ.ಜೆ. ಜಸ್ಟೋ, ಬೆಂಗಳೂರು	ಸದಸ್ಯರು
3.	ಪ್ರೊ॥ ಭಾವಿಕಟ್ಟಿ (ಮಾಜಿ ಇಲಾಖಾ ಮುಖ್ಯಸ್ಥರು, ಸಿವಿಲ್ ಇಂಜಿನಿಯರಿಂಗ್, ಎನ್.ಐ.ಟಿ., ಸೂರತ್ಕಲ್)	ಸದಸ್ಯರು
4.	ಶ್ರೀ ಜಿ. ಸಿ. ತಲ್ಲೂರ್, ಹಿಂದಿನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
5.	ಪ್ರೊ॥ ಬಿ. ಆರ್. ಶ್ರೀನಿವಾಸಮೂರ್ತಿ, ಮಾಜಿ ಪ್ರೊಫೆಸರ್, IISc, ಬೆಂಗಳೂರು.	ಸದಸ್ಯರು
6.	ಡಾ॥ ಪಿ. ಮಹದೇವಪ್ಪ, ಪ್ರನ್ಸಿಪಾಲ್, ಮೈಸೂರು	ಸದಸ್ಯರು
7.	ಶ್ರೀ ವಿ.ಟಿ. ಬೆಲ್ಲದ್, ನಿವೃತ್ತ ಮುಖ್ಯ ಅಭಿಯಂತರರು, ಜಲಸಂಪನ್ಮೂಲ ಇಲಾಖೆ	ಸದಸ್ಯರು
8.	ಪ್ರೊ॥ ಎಸ್.ಎನ್. ಕಿರಣ್ ಶಂಕರ್, ಬೆಂಗಳೂರು	ಸದಸ್ಯರು
9.	ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ	ಸದಸ್ಯರು
10.	ಶ್ರೀ ರವೀಂದ್ರನಾಥ ತಜ್ಞರು	ಸದಸ್ಯ ಕಾರ್ಯದರ್ಶಿ

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋ.ಇ./64/ಇಎಪಿ/2008, ಬೆಂಗಳೂರು, ದಿನಾಂಕ: 3ನೇ ನವೆಂಬರ್ 2008.

ಡಾ॥ ಸಿ. ಎಸ್. ವಿಶ್ವನಾಥ, ಅಧ್ಯಕ್ಷರು, ಟಾರ್‌ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಇವರ ಅಧ್ಯಕ್ಷತೆಯಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಕಾಮಗಾರಿಗಳ ಗುಣಮಟ್ಟ ನಿಯಂತ್ರಣ ಕಾರ್ಯಪಡೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

ಕ್ರಮ ಸಂಖ್ಯೆ	ಸದಸ್ಯರ ಹೆಸರು	ಹುದ್ದೆ
1.	ಡಾ॥ ಸಿ. ಎಸ್. ವಿಶ್ವನಾಥ್, ಅಧ್ಯಕ್ಷರು, ಟಾರ್ ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಬೆಂಗಳೂರು	ಅಧ್ಯಕ್ಷರು
2.	ಪ್ರೊ॥ ಸಿ.ಇ.ಜೆ. ಜಸ್ಟೋ, ಬೆಂಗಳೂರು	ಸದಸ್ಯರು
3.	ಪ್ರೊ॥ ಭಾವಿಕಟ್ಟಿ (ಮಾಜಿ ಇಲಾಖಾ ಮುಖ್ಯಸ್ಥರು, ಸಿವಿಲ್ ಇಂಜಿನಿಯರಿಂಗ್, ಎನ್.ಐ.ಟಿ., ಸೂರತ್ಕಲ್)	ಸದಸ್ಯರು
4.	ಶ್ರೀ ಜಿ. ಸಿ. ತಲ್ಲೂರ್, ಹಿಂದಿನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
5.	ಪ್ರೊ॥ ಬಿ. ಆರ್. ಶ್ರೀನಿವಾಸಮೂರ್ತಿ, ಮಾಜಿ ಪ್ರೊಫೆಸರ್, IISc, ಬೆಂಗಳೂರು.	ಸದಸ್ಯರು
6.	ಡಾ॥ ಪಿ. ಮಹದೇವಪ್ಪ, ಪ್ರಿನ್ಸಿಪಾಲ್, ಮೈಸೂರು	ಸದಸ್ಯರು
7.	ಶ್ರೀ ವಿ.ಟಿ. ಬೆಲ್ಲದ್, ನಿವೃತ್ತ ಮುಖ್ಯ ಅಭಿಯಂತರರು, ಜಲಸಂಪನ್ಮೂಲ ಇಲಾಖೆ	ಸದಸ್ಯರು
8.	ಪ್ರೊ॥ ಎಸ್.ಎನ್. ಕಿರಣ್ ಶಂಕರ್, ಬೆಂಗಳೂರು	ಸದಸ್ಯರು
9.	ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ	ಸದಸ್ಯರು
10.	ಶ್ರೀ ರವೀಂದ್ರನಾಥ ತಜ್ಞರು	ಸದಸ್ಯ ಕಾರ್ಯದರ್ಶಿ

ಸದರಿ ಕಾರ್ಯಪಡೆಯ ಉಲ್ಲೇಖ ನಿಬಂಧನೆಗಳ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು. (Terms of Reference)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಹಾಗೂ

ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 1592

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಂ. ವೆಂಕಟರಮಣಪ್ಪ ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಪಿ.ಹೆಚ್.ಡಿ. ಪದವಿಯನ್ನು ಪ್ರದಾನ ಮಾಡಿರುವುದನ್ನು ರದ್ದುಗೊಳಿಸುವ ಬಗ್ಗೆ.

ಓದಲಾಗಿದೆ : 1. ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರ ಪತ್ರ ಸಂಖ್ಯೆ : ಜಿಎಸ್ 3 ಬಿಯುಎಂ 2003, ದಿನಾಂಕ : 4–6–2008, 28–10–2008.

2. ಶ್ರೀ ವಾಸುದೇವಮೂರ್ತಿ ಇವರು ಸಲ್ಲಿಸಿದ್ದ ರಿಟ್ ಅರ್ಜಿ ಸಂ. 6091/2009 (GMRES-PIL)

ಪ್ರಸ್ತಾವನೆ :

ಬೆಂಗಳೂರು ವಿಶ್ವವಿದ್ಯಾಲಯವು ಶ್ರೀ ಎಂ. ವೆಂಕಟರಮಣಪ್ಪ ಇವರಿಗೆ ಗ್ರಾಮೀಣ ಕರ್ನಾಟಕ ಸಣ್ಣ ರೈತರು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ ಎಂಬ ಬಗ್ಗೆ ಪಿ.ಹೆಚ್.ಡಿ. ಪದವಿಯನ್ನು ಪ್ರದಾನ ಮಾಡಿರುವ ಬಗ್ಗೆ ಅವರ ವಿರುದ್ಧ ಮತ್ತು ಅವರ ಮಾರ್ಗದರ್ಶಕರ ವಿರುದ್ಧ ಕೃತಿಚೌರ್ಯದ ದೂರನ್ನು ಸ್ವೀಕರಿಸಿದ ಆಧಾರದ ಮೇಲೆ ಶ್ರೀ ಕೆ.ವಿ. ಇರ್ನಿರಾಯ, ನಿವೃತ್ತ, ಐ.ಎ.ಎಸ್. ಅಧಿಕಾರಿಗಳು, ಇವರ ನೇತೃತ್ವದಲ್ಲಿ ಒಂದು ವಿಚಾರಣಾ ಆಯೋಗವನ್ನು ನೇಮಿಸಲಾಗಿತ್ತು. ಈ ವಿಚಾರಣಾ ಆಯೋಗವು ಘನತೆವೆತ್ತ ರಾಜ್ಯಪಾಲರ ಕಛೇರಿಗೆ ತನ್ನ ವರದಿಯನ್ನು ಸಲ್ಲಿಸಿದೆ. ಸದರಿ ವರದಿಯಲ್ಲಿ ಶ್ರೀ ಎಂ. ವೆಂಕಟರಮಣಪ್ಪ ಇವರು ತಮ್ಮ ಪಿ.ಹೆಚ್.ಡಿ. ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ತಮ್ಮ ಮಾರ್ಗದರ್ಶಕರ ಕೃತಿಯನ್ನು ಯಥಾವತ್ತಾಗಿ ಇಂಗ್ಲೀಷ್‌ನಿಂದ ಕನ್ನಡಕ್ಕೆ ಕೃತಿ ಚೌರ್ಯದ ಮೂಲಕ ಅಳವಡಿಸಿಕೊಂಡು ತಮ್ಮ ಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆಂದು ನಿಸ್ಸಂಶಯವಾಗಿ ಸಾಬೀತಾಗಿದೆಯೆಂದು ವಿಚಾರಣಾ ವರದಿಯಲ್ಲಿ ತಿಳಿಸಲಾಗಿದೆ. ಆದ್ದರಿಂದ, ವಿಚಾರಣಾ ವರದಿಯ ಆಧಾರದ ಮೇಲೆ ಘನತೆವೆತ್ತ ರಾಜ್ಯಪಾಲರು ಕೆ.ಎಸ್.ಯು. ಅಧಿನಿಯಮ, 2000ದ ಪ್ರಕರಣ 8(4)ರಡಿ ಬೆಂಗಳೂರು ವಿಶ್ವವಿದ್ಯಾಲಯವು ಶ್ರೀ ಎಂ. ವೆಂಕಟರಮಣಪ್ಪ ಇವರಿಗೆ ಪ್ರದಾನ ಮಾಡಿರುವ ಪಿ.ಹೆಚ್.ಡಿ. ಪದವಿಯನ್ನು ಕೂಡಲೇ ರದ್ದುಪಡಿಸಲು ಸಂಬಂಧಪಟ್ಟ ಸಿಂಡಿಕೇಟ್‌ನ ತೀರ್ಮಾನವನ್ನು ರದ್ದುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿರುತ್ತಾರೆ. ಮೇಲೆ ಓದಲಾದ (2) ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ : 7–3–2011 ರಂದು ತೀರ್ಪು ನೀಡಿ, ಸದರಿಯವರಿಗೆ ನೀಡಿರುವ ಪಿ.ಹೆಚ್.ಡಿ. ಪದವಿಯನ್ನು ಘನತೆವೆತ್ತ ರಾಜ್ಯಪಾಲರ ಆದೇಶಾನುಸಾರ ರದ್ದುಪಡಿಸುವಂತೆ ಆದೇಶಿಸಿದೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಇಡಿ 63 ಯುಬಿವಿ 2011, ಬೆಂಗಳೂರು, ದಿನಾಂಕ : 29–3–2011

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳು ಹಾಗೂ ಮೇಲೆ ಎರಡರಲ್ಲಿ ಓದಲಾದ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿರುವ ದಿನಾಂಕ : 7–3–2011ರ ತೀರ್ಪಿನ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಶ್ರೀ ಎಂ. ವೆಂಕಟರಮಣಪ್ಪ ಇವರಿಗೆ ಗ್ರಾಮೀಣ ಕರ್ನಾಟಕ ಸಣ್ಣ ರೈತರು–ಒಂದು ಸಮಾಜ ಶಾಸ್ತ್ರೀಯ ಅಧ್ಯಯನ ಎಂಬ ಅಧ್ಯಯನ ಪ್ರಬಂಧಕ್ಕಾಗಿ ಪಿ.ಹೆಚ್.ಡಿ ಪದವಿಯನ್ನು ನೀಡುವ ಕುರಿತು ತೆಗೆದುಕೊಂಡ ಸಂಬಂಧಪಟ್ಟ ಸಿಂಡಿಕೇಟ್ ತೀರ್ಮಾನವನ್ನು ಹಾಗೂ ಈ ಬಗ್ಗೆ ಹೊರಡಿಸಲಾಗಿರುವ ಅಧಿಸೂಚನೆ ಸಂ. ಇಫಿ.ಖಖ/ ಕಊ.ಆ/ಇಗ೦/೦ಖಖಖ/ಖಔಅಖಔ/2001–02, ದಿನಾಂಕ : 11–11–2002ಅನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 10(1) ರ ಅನ್ವಯ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಯು.ಬಿ. ಉಳವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಪಿ.ಆರ್. 1043

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ : ಸಿ3(1) ಪ್ರಾ.ಶಿ.ಹೆಚ್ಚು–1/2010–11, ದಿನಾಂಕ : 28–3–2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 23–3–2011ರ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಉತ್ತಮ ಗುಣಮಟ್ಟದಲ್ಲಿ ಕಲಿಕೆ ಸಾಧಿಸಲು ಮಕ್ಕಳ ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರನ್ನು ಸ್ಥಳ ನಿಯುಕ್ತಿ ಮಾಡುವುದು ತೀರ ಅಗತ್ಯ ಕ್ರಮವಾಗಿದೆ. ಈಶಾನ್ಯ ವಲಯದ ಜಿಲ್ಲೆಗಳಲ್ಲಿ ಶಿಕ್ಷಕರ : ಮಕ್ಕಳ ಅನುಪಾತ ಇತರೆ ಜಿಲ್ಲೆಗಳಿಗಿಂತ ಜಾಸ್ತಿಯಿದ್ದು, ಇತರೆ ಜಿಲ್ಲೆಯೊಳಗಿನ ಕೆಲವು ತಾಲ್ಲೂಕುಗಳಲ್ಲೂ ಈ ಅಸಮಾನತೆ ಇರುವುದು ಕಂಡುಬಂದಿದೆ. ಮಕ್ಕಳ ಮತ್ತು ಶಿಕ್ಷಕರ ಅನುಪಾತದ ಅಸಮಾನತೆಯನ್ನು ಸರಿದೂಗಿಸಲು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

2. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಲು ನಿರ್ಧಿಷ್ಟ ಮಾನದಂಡ ನಿಗದಿಪಡಿಸಲು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ ಹೊರಡಿಸಲು ಉದ್ದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 644 ಪಿಬಿಎಸ್ 2010, ಬೆಂಗಳೂರು, ದಿನಾಂಕ : 1–4–2011

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಲು ಈ ಕೆಳಕಾಣಿಸಿದ ಮಾನದಂಡಗಳನ್ನು ನಿಗದಿಪಡಿಸಲಾಗಿದೆ.

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ		ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ		ಷರಾ
ವಿದ್ಯಾರ್ಥಿಗಳ ಸಂಖ್ಯೆ	ಅಗತ್ಯ ಶಿಕ್ಷಕರ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಅಗತ್ಯ ಶಿಕ್ಷಕರ ಸಂಖ್ಯೆ	
11 ರಿಂದ 30	02	90 ರವರೆಗೆ	04	
31 ರಿಂದ 50	03	91 ರಿಂದ 120	05	ಒಬ್ಬರು ಆಂಗ್ಲ ಭಾಷಾ ಶಿಕ್ಷಕರು
51 ರಿಂದ 90	04	121 ರಿಂದ 160	06	ಮುಖ್ಯ ಶಿಕ್ಷಕರು–1 ವಿಜ್ಞಾನ ಶಿಕ್ಷಕರು–1
91 ರಿಂದ 120	05 (ಆಂಗ್ಲ ಶಿಕ್ಷಕರು–1)	161 ರಿಂದ 200	07	
121 ರಿಂದ 180	06	201 ರಿಂದ 240	08	ಹಿಂದಿ ಶಿಕ್ಷಕರು–1 ದೈಹಿಕ ಶಿಕ್ಷಕರು–1
181 ರ ನಂತರ ಪ್ರತಿ 30 ಮಕ್ಕಳಿಗೆ 1:30ರ ಅನುಪಾತದಲ್ಲಿ ಮತ್ತೊಬ್ಬ ಶಿಕ್ಷಕರು		241 ರಿಂದ 270	09	ಸಂಗೀತ/ಚಿತ್ರಕಲೆ ಶಿಕ್ಷಕರು–1
		271 ರಿಂದ 300	10	
		301 ರ ನಂತರ ಪ್ರತಿ 30 ಮಕ್ಕಳಿಗೆ 1:30ರ ಅನುಪಾತದಲ್ಲಿ ಮತ್ತೊಬ್ಬ ಶಿಕ್ಷಕರು		

2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 91 ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಒಂದು ಆಂಗ್ಲ ಭಾಷಾ ಶಿಕ್ಷಕರ ಹುದ್ದೆ, 121 ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಒಂದು ವಿಜ್ಞಾನ ಶಿಕ್ಷಕರ ಹುದ್ದೆ, 200 ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಒಂದು ಹಿಂದಿ ಶಿಕ್ಷಕರ ಹುದ್ದೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ನಿಗದಿಪಡಿಸಲಾಗಿದೆ. 240 ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಸಂಗೀತ ಅಥವಾ ಚಿತ್ರಕಲಾ ಶಿಕ್ಷಕರ ಹುದ್ದೆ ನಿಗದಿಪಡಿಲಾಗಿದೆ.

3. ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ರಾಷ್ಟ್ರೀಯ ಸಾಕ್ಷರತೆಯ ಸರಾಸರಿಗಿಂತ ಕಡಿಮೆ ಸಾಕ್ಷರತಾ ಪ್ರಮಾಣ ಹೊಂದಿರುವ ತಾಲ್ಲೂಕುಗಳ ಶಾಲೆಗಳಲ್ಲಿ ಮತ್ತು ಮಲೆನಾಡು ಪ್ರದೇಶದ ಶಾಲೆಗಳಲ್ಲಿ ಈ ಕೆಳಕಂಡ ಅನುಪಾತವನ್ನು ಅನುಸರಿಸಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸಂಖ್ಯೆಯನ್ನು ಲೆಕ್ಕ ಹಾಕಿ ಕ್ರಮ ತೆಗೆದುಕೊಳ್ಳುವುದು.

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ		ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ	
ವಿದ್ಯಾರ್ಥಿಗಳ ಸಂಖ್ಯೆ	ಅಗತ್ಯ ಶಿಕ್ಷಕರ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಅಗತ್ಯ ಶಿಕ್ಷಕರ ಸಂಖ್ಯೆ
01–50	02+1 ಕನ್ನಡ	15–75	04+1 ಕನ್ನಡ *
51–100	03+1 ಕನ್ನಡ	75–130	05+1 ಕನ್ನಡ *
101–150	04+1 ಕನ್ನಡ	131–180	06+1 ಕನ್ನಡ *
151–180	05+1 ಕನ್ನಡ		
181 ರ ನಂತರ ಕನ್ನಡ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ 25:1 ರ ಅನುಪಾತದಲ್ಲಿ ಮತ್ತೊಬ್ಬ ಶಿಕ್ಷಕರು		181 ರ ನಂತರ ಕನ್ನಡ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ 25:1 ರ ಅನುಪಾತದಲ್ಲಿ ಮತ್ತೊಬ್ಬ ಶಿಕ್ಷಕರು	

ವಿಶೇಷ ಸೂಚನೆ : * ಕನ್ನಡ ಶಿಕ್ಷಕರು ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ ಮಾತ್ರ

4. **ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವಾಗ ಈ ಕೆಳಕಾಣಿಸಿದಂತೆ ವಿನಾಯಿತಿ ನೀಡುವುದು.**

1. ಮೇ 31ರಲ್ಲಿದಂತೆ ಮುಂದಿನ 2 ಶೈಕ್ಷಣಿಕ ವರ್ಷಗಳಲ್ಲಿ ನಿವೃತ್ತರಾಗಲಿರುವ ಶಿಕ್ಷಕರು
2. ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮದಡಿ ಕೆಲಸ ಮಾಡುತ್ತಿರುವ ಶಿಕ್ಷಕರು
3. ಶೇಕಡಾ 40 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಶಿಕ್ಷಕರು
4. ಹೆಚ್ಚುವರಿ ಶಿಕ್ಷಕರಲ್ಲಿ ಒಬ್ಬರು ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದು, ಜಿಲ್ಲೆಯೊಳಗೆ ದೈಹಿಕ ಶಿಕ್ಷಣ ಶಿಕ್ಷಕರ ಅವಶ್ಯಕತೆಯಿರುವ ಬೇರೆ ಶಾಲೆಗಳು ಇಲ್ಲವಾದಲ್ಲಿ,
5. 2001ರ ನಂತರ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾಗಿರುವ ಇಂಗ್ಲೀಷ್, ವಿಜ್ಞಾನ ಅಥವಾ ಹಿಂದಿ ವಿಷಯದ ಶಿಕ್ಷಕರಾಗಿದ್ದು, ಸದರಿ ಶಾಲೆಯಲ್ಲಿ ಅಗತ್ಯ ಮಕ್ಕಳ ಸಂಖ್ಯೆ ಇದ್ದಲ್ಲಿ
6. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಚುನಾಯಿತ ಪದಾಧಿಕಾರಿಗಳಾದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ.
7. ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾಗಿದ್ದು, ಜೇಷ್ಟತಾ ಘಟಕದೊಳಗೆ ಸದರಿ ಶಿಕ್ಷಕರ ಅಗತ್ಯತೆ ಇರುವ ಬೇರೆ ಶಾಲೆಗಳು ಇರದಿದ್ದಲ್ಲಿ
8. ಮಾಜಿ ಸೈನಿಕರ ಪತ್ನಿಯರು
9. ವಿಧವೆಯರು
10. ತೀವ್ರತರ ಕಾಯಿಲೆ ಇರುವ ಪ್ರಕರಣಗಳು

5. **ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಸ್ಥಳಾಂತರಿಸಲು ಶಿಕ್ಷಕರ ಅಗತ್ಯತೆಯಿರುವ ಶಾಲೆಗಳ ಪಟ್ಟಿ ಸಿದ್ಧಪಡಿಸುವುದು :–** ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಸ್ಥಳಾಂತರಿಸಲು ಈ ಕೆಳಕಾಣಿಸಿದ ಆದ್ಯತೆಗೆ ಅನುಸಾರವಾಗಿ ಶಿಕ್ಷಕರ ಅಗತ್ಯತೆಯಿರುವ ಶಾಲೆಗಳ ಪಟ್ಟಿ ಸಿದ್ದಪಡಿಸತಕ್ಕದ್ದು.

1. ಮೊದಲನೆಯದಾಗಿ ಮೇಲೆ ತಿಳಿಸಿರುವ ಅನುಪಾತದಲ್ಲಿ ಶಿಕ್ಷಕರ ಹುದ್ದೆಯ ಅಗತ್ಯತೆ ಇರುವ ಕಿರಿಯ ಪ್ರಾಥಮಿಕ ಶಾಲೆಗಳು
2. ಎರಡನೆಯದಾಗಿ ಮೇಲೆ ತಿಳಿಸಿರುವ ಅನುಪಾತದಲ್ಲಿ ಶಿಕ್ಷಕರು ಹುದ್ದೆಯ ಅಗತ್ಯತೆ ಇರುವ ಹಿರಿಯ ಪ್ರಾಥಮಿಕ ಶಾಲೆಗಳು.
3. ಅಲ್ಪಸಂಖ್ಯಾತ ಭಾಷಾ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆ ಮಂಜೂರಾಗದಿದ್ದಲ್ಲಿ ಆ ಶಾಲೆಗೆ ಒಂದು ಕನ್ನಡ ಶಿಕ್ಷಕರ ಹುದ್ದೆಯನ್ನು ಸ್ಥಳಾಂತರಿಸುವುದು.
4. ಮಕ್ಕಳ ಶಿಕ್ಷಕರ ಅನುಪಾತಕ್ಕನುಗುಣವಾಗಿ ಶಿಕ್ಷಕರ ಅಗತ್ಯತೆ ಇರುವ ಶಾಲೆಗಳ ಪಟ್ಟಿ ಸಿದ್ದಪಡಿಸುವಾಗ ಯಾವುದೇ ಗ್ರಾಮೀಣ ಪ್ರದೇಶವನ್ನು ಒಳಗೊಳ್ಳದ ಜೇಷ್ಠತಾ ಘಟಕವಾಗಿದ್ದಲ್ಲಿ, 'ಎ' ವಲಯದ ಶಾಲೆಗಳನ್ನು ಸೇರಿಸುವುದು.
5. ಕ್ರಮ ಸಂಖ್ಯೆ 2 ರಲ್ಲಿ ನಿಗದಿಪಡಿಸಿರುವಂತೆ ಸಿಬ್ಬಂದಿ ರಚನೆ ಅನ್ವಯ ಶಿಕ್ಷಕರ ಅಗತ್ಯತೆ ಇರುವ ಶಾಲೆಗಳು

6. **ಹೆಚ್ಚುವರಿ ಶಿಕ್ಷಕರ ಆದ್ಯತಾಪಟ್ಟಿ ಸಿದ್ದಪಡಿಸುವಿಕೆ :–**

ಶಿಕ್ಷಕರ ಅವಶ್ಯಕತೆ ಇರುವ ಶಾಲೆಗಳ ಪಟ್ಟಿ ಸಿದ್ದಪಡಿಸಿದ ನಂತರ ಹೆಚ್ಚುವರಿ ಶಿಕ್ಷಕರು ಆದ್ಯತಾ ಪಟ್ಟಿ ಸಿದ್ದಪಡಿಸಲು ಈ ಕೆಳಕಾಣಿಸಿದ ಮಾರ್ಗಸೂಚಿ ಅನುಸರಿಸುವುದು. ಮೊದಲನೆಯದಾಗಿ ಪರಿಷ್ಕೃತ ಮಾನದಂಡದ ಪ್ರಕಾರ ಹೆಚ್ಚುವರಿ ಎಂದು ಗುರ್ತಿಸಿ ಅಂತಹ ಎಲ್ಲಾ ಶಿಕ್ಷಕರ ಸಾಮಾನ್ಯ ಪಟ್ಟಿ ಸಿದ್ದಪಡಿಸುವುದು. ಆದರೆ ಕೌನ್ಸಿಲಿಂಗ್ ನಡೆಸಲು ಕ್ರಮ ಸಂಖ್ಯೆ 5 ರಲ್ಲಿ ತಿಳಿಸಿರುವಂತಹ ಶಿಕ್ಷಕರ ಅಗತ್ಯತೆ ಇರುವ ಶಾಲೆಗಳು ಸ್ಥಳಾಂತರಿಸಬೇಕಾದ ಹುದ್ದೆಗಳ ಸಂಖ್ಯೆ ಹಾಗೂ ಜಿಲ್ಲೆಯ ಒಳಗೆ ಶಿಕ್ಷಕರ ಅಗತ್ಯತೆ ಇರುವ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಶಿಕ್ಷಕರ ಆದ್ಯತಾ ಪಟ್ಟಿಯನ್ನು ಸದರಿ ಶಾಲೆಯಲ್ಲಿ ಹೆಚ್ಚು ಸೇವೆ–ಸಲ್ಲಿಸಿರುವ ಶಿಕ್ಷಕರನ್ನು ಜನ್ಮದಿನಾಂಕದ ಆಧಾರದ ಮೇಲೆ ಈ ಕೆಳಕಂಡ ಆದ್ಯತಾ ಕ್ರಮದಲ್ಲಿ ಸಿದ್ದಪಡಿಸತಕ್ಕದ್ದು.

ಎ) ಪತಿ–ಪತ್ನಿ ಪ್ರಕರಣಗಳಲ್ಲಿ ಮಹಿಳೆಯರು

ಬಿ) ಪತಿ–ಪತ್ನಿ ಪ್ರಕರಣಗಳಲ್ಲಿ ಪುರುಷರು

ಸಿ)ಇತರೆ ಮಹಿಳಾ ಶಿಕ್ಷಕರು

ಡಿ) ಇತರೆ ಪುರುಷ ಶಿಕ್ಷಕರು

7. **ಹೆಚ್ಚುವರಿ ಶಿಕ್ಷಕರ ಹುದ್ದೆ ಸ್ಥಳಾಂತರಿಸುವ ಕ್ರಮ :–**

1. ಹೆಚ್ಚುವರಿ ಶಿಕ್ಷಕರ ಆದ್ಯತಾ ಪಟ್ಟಿಯನ್ನು ತಯಾರಿಸಿ, ಪ್ರಕಟಿಸಿ ಶಿಕ್ಷಕರಿಗೆ ಆಕ್ಷೇಪಣೆ ನೀಡಲು 15 ದಿನ ಕಾಲಾವಕಾಶ ನೀಡುವುದು.
2. ಆಕ್ಷೇಪಣೆ ಸ್ವೀಕರಿಸಿದ ನಂತರ ಲೋಪದೋಷಗಳನ್ನು ಸರಿಪಡಿಸಿ ಅಂತಿಮ ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸುವುದು.
3. ಹೆಚ್ಚುವರಿ ಎಂದು ಗುರುತಿಸಿದ ಶಿಕ್ಷಕರ ಆದ್ಯತಾ ಪಟ್ಟಿಯನ್ನು ಮುಂಚಿತವಾಗಿ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ/ಉಪನಿರ್ದೇಶಕರ ಕಛೇರಿಯಲ್ಲಿ ಪ್ರಕಟಿಸುವುದು.

8. **ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ :–**

ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಕೌನ್ಸಿಲಿಂಗ್ ಮೂಲಕ ನಡೆಸುವುದು. ಆದರೆ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಸಮಯದಲ್ಲಿ ಶಿಕ್ಷಕರ ಹಾಜರಾತಿ ಹಾಗೂ ಸ್ಥಳ ಆಯ್ಕೆ ಕಡ್ಡಾಯ. ಒಂದು ವೇಳೆ ಹೆಚ್ಚುವರಿ ಶಿಕ್ಷಕರು ಕೌನ್ಸಿಲಿಂಗ್‌ಗೆ ಗೈರು ಹಾಜರಾದಲ್ಲಿ ಹೆಚ್ಚುವರಿ ಶಿಕ್ಷಕರು ಕೌನ್ಸಿಲಿಂಗ್ ಪ್ರಕ್ರಿಯೆ ಮುಗಿದ ನಂತರ, ಪ್ರಕಟಿಸಲಾದ ಖಾಲಿ ಹುದ್ದೆಗಳ ಪೈಕಿ ಒಂದು ಖಾಲಿ ಹುದ್ದೆಗೆ ಅಥವಾ ಶಿಕ್ಷಕರ ಅಗತ್ಯತೆ ಇರುವ ಶಾಲೆಗೆ ಸಂಬಂಧಿಸಿದ ಉಪನಿರ್ದೇಶಕರು ಪ್ರಾಕ್ಸಿ ಕೌನ್ಸಿಲಿಂಗ್ ಮಾಡಿ ಆದೇಶವನ್ನು ನೋಂದಣಿ ಅಂಚೆ ಮೂಲಕ ಸಂಬಂಧಿಸಿದ ಶಿಕ್ಷಕರಿಗೆ ಕಳುಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ಪ್ರಭುಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1045 ಶಿಕ್ಷಣ ಇಲಾಖೆ (ಪ್ರಾಥಮಿಕ).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಯೋಜನಾ ಇಲಾಖೆಯ ಅಪರ /ಜಂಟಿ ಕಾರ್ಯದರ್ಶಿಗಳ ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 29 ಸಅಸೇ 2008, ದಿನಾಂಕ : 27–2–2008.

2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 290 ಸಅಸೇ 2009, ದಿನಾಂಕ : 10–6–2009.

3. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 181 ಸಅಸೇ 2010, ದಿನಾಂಕ : 1–4–2010.

4. ಯೋಜನಾ ಇಲಾಖೆಯ ಕಡತ ಸಂಖ್ಯೆ : ಪಿಡಿ 27 ಎಸ್‌ಪಿಪಿ /2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 27–2–2008 ರ ಸರ್ಕಾರಿ ಆದೇಶದಲ್ಲಿ ಯೋಜನಾ ಇಲಾಖೆಯಲ್ಲಿ ಅಪರ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಹುದ್ದೆಗಳೊಂದಿಗೆ ತಾತ್ಕಾಲಿಕವಾಗಿ ಸೃಜಿಸಿ ವರ್ಷದಿಂದ ವರ್ಷಕ್ಕೆ ಮುಂದುವರಿಸಲಾಗಿದೆ. ಯೋಜನಾ ಇಲಾಖೆಯು ಡಾ॥ ನಂಜುಂಡಪ್ಪ ವರದಿಯ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ವಿಶೇಷ ಅಭಿವೃದ್ಧಿ ಯೋಜನೆಯು 2015 ರ ವರೆಗೆ ಇರುವುದರಿಂದ ವಿಶೇಷ ಕೋಶವನ್ನು ಪೂರಕ ಸಿಬ್ಬಂದಿಯೊಂದಿಗೆ ಮತ್ತೆ ಒಂದು ವರ್ಷದ ಅವಧಿಗೆ ಮುಂದುವರಿಸುವಂತೆ ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಕಡತದಲ್ಲಿ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 188 ಸಅಸೇ 2011, ಬೆಂಗಳೂರು, ದಿನಾಂಕ : 7ನೇ ಏಪ್ರಿಲ್ 2011

ಯೋಜನಾ ಇಲಾಖೆಯಲ್ಲಿಯ ಜಂಟಿ ಕಾರ್ಯದರ್ಶಿ/ಅಪರ ಕಾರ್ಯದರ್ಶಿಗಳ ಹುದ್ದೆಯನ್ನು ದಿನಾಂಕ : 1–4–2011 ರಿಂದ ಜಾರಿಗೆ ಬರುವಂತೆ ಹಾಗೂ ಒಂದು ವರ್ಷದ ಅವಧಿಗೆ ಕೆಳಕಂಡ ಪೂರಕ ಸಿಬ್ಬಂದಿ ಹುದ್ದೆಗಳೊಡನೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಶೀಘ್ರಲಿಪಿಗಾರ	1 ಹುದ್ದೆ
2.	ಕಿರಿಯ ಸಹಾಯಕ	1 ಹುದ್ದೆ
3.	ದಲಾಯತ್/ಜಮೇದಾರ್	1 ಹುದ್ದೆ ಹೊರ ಗುತ್ತಿಗೆಯಿಂದ

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ : 10–7–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಆರ್. ವಿಜಯಾನಂದ ಶರ್ಮಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3).

ಪಿ.ಆರ್. 1046

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಲೆಕ್ಕಪತ್ರ–ಐಆರ್‌ಎಲ್‌ಎ) ಶಾಖೆಯಲ್ಲಿ ಲೆಕ್ಕ ಅಧೀಕ್ಷಕರ ಹುದ್ದೆಯನ್ನು ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಕಡತ ಸಂಖ್ಯೆ : ಸಿಆಸುಇ 126 ಲೆಪ–ಐಆರ್‌ಎಲ್‌ಎ 2011.

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಕಡತದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಲೆಕ್ಕಪತ್ರ–ಐಆರ್‌ಎಲ್‌ಎ) ಶಾಖೆಯಲ್ಲಿ ಭಾರತೀಯ ಆಡಳಿತ ಸೇವೆ, ಕೆ.ಎ.ಎಸ್. ಕಾನೂನು ಅಧಿಕಾರಿ ಹಾಗೂ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚ, ನಗದು ಪುಸ್ತಕದ ವಹಿವಾಟು, ಮಹಾಲೇಖಪಾಲರ ಆಕ್ಷೇಪಣೆಗಳಿಗೆ ಉತ್ತರಿಸುವುದು, ಇನ್ನಿತರೆ ಕೆಲಸಗಳನ್ನು ಸುಗಮವಾಗಿ ನಡೆಸುವ ಸಲುವಾಗಿ ಶಾಖೆಯಲ್ಲಿರುವ ಲೆಕ್ಕಾಧೀಕ್ಷಕರ ಹುದ್ದೆಯನ್ನು ಲೆಕ್ಕಾಧಿಕಾರಿ ಹುದ್ದೆಗೆ ಉನ್ನತೀಕರಿಸುವಂತೆ ಕೋರಿದೆ. ಅದರಂತೆ ಸರ್ಕಾರವು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 138 ಸಅಸೇ 2011, ಬೆಂಗಳೂರು, ದಿನಾಂಕ : 7ನೇ ಏಪ್ರಿಲ್ 2011

ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಲೆಕ್ಕಪತ್ರ–ಐಆರ್‌ಎಲ್‌ಎ–ಶಾಖೆಯಲ್ಲಿನ ಲೆಕ್ಕಾಧೀಕ್ಷಕರ ಹುದ್ದೆಯನ್ನು ನಿಲಂಬನೆಯಲ್ಲಿಟ್ಟು (Abeyance) ಲೆಕ್ಕಾಧಿಕಾರಿ ಹುದ್ದೆಯನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಈ ಹುದ್ದೆಗೆ ನಿಯೋಜಿಸುವ ಅಧಿಕಾರಿಯ ಸೇವೆ ಅಗತ್ಯವಿರುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸೃಜಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಆಇ 346 ಸೇ 3 2011, ದಿನಾಂಕ : 15–3–2011ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಆರ್. ವಿಜಯಾನಂದ ಶರ್ಮಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 1047

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ವಿಷಯ : ರಾಷ್ಟ್ರ ಲಾಂಛನವನ್ನು ಧ್ಯೇಯ ವಾಕ್ಯ "ಸತ್ಯಮೇವ ಜಯತೆ" ಯೊಂದಿಗೆ ಸಂಪೂರ್ಣವಾಗಿ ಪ್ರದರ್ಶಿಸುವ ಕುರಿತು.

ಉಲ್ಲೇಖ : 1. ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 104 ರಾರಾಆ 2010, ದಿನಾಂಕ : 29–10–2010.

2. ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ಪತ್ರ ಸಂಖ್ಯೆ : 13/1/2009–ಕಣಭಟುಛಿ, ದಿನಾಂಕ : 2–2–2011

ಭಾರತ ರಾಷ್ಟ್ರ ಲಾಂಛನವನ್ನು ಧ್ಯೇಯ ವಾಕ್ಯ " ಸತ್ಯಮೇವ ಜಯತೆ" ಯೊಂದಿಗೆ ಸಂಪೂರ್ಣವಾಗಿ ಪ್ರದರ್ಶಿಸುವ ಕುರಿತು ಉಲ್ಲೇಖಿತ (1) ರಲ್ಲಿ ನಮೂದಿಸಿರುವ ದಿನಾಂಕ : 29–10–2010ರ ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಈ ಮಧ್ಯೆ ಉಲ್ಲೇಖಿತ (2)ರ ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ದಿನಾಂಕ : 2–2–2011ರ ಪತ್ರದಲ್ಲಿ, ಭಾರತದ ರಾಷ್ಟ್ರ ಲಾಂಛನವನ್ನು ಬಳಸಲು ಅಧಿಕಾರ ಹೊಂದಿರುವ ಸರ್ಕಾರಿ ಏಜೆನ್ಸಿಗಳು, ನಮೂನೆಯಲ್ಲಿ ಲಗತ್ತಿಸಿರುವ ಪ್ರಕಾರ ಸಿಂಹ ಮುಕುಟದ ಪಾರ್ಶ್ವ ಚಿತ್ರದ ಕೆಳಗೆ ಬರೆದ ದೇವನಾಗರಿ ಭಾಷೆಯಲ್ಲಿ "ಸತ್ಯಮೇವ ಜಯತೆ" ಧ್ಯೇಯ ವಾಕ್ಯವಿರುವ ರಾಷ್ಟ್ರ ಲಾಂಛನದ ಪೂರ್ಣ ಚಿತ್ರ ಬಳಸದಿರುವುದು ಗಮನಕ್ಕೆ ಬಂದಿದೆ. ಆದಕಾರಣ, ಈ ಬಗ್ಗೆ ಮತ್ತೊಮ್ಮೆ ಸೂಕ್ತ ಸೂಚನೆಗಳನ್ನು ಸಂಬಂಧಪಟ್ಟ ಏಜೆನ್ಸಿಗಳಿಗೆ ನೀಡಬೇಕೆಂದು ತಿಳಿಸಿರುತ್ತದೆ.

2. ಭಾರತದ ರಾಷ್ಟ್ರ ಲಾಂಛನದ ಅಪೂರ್ಣ ಪ್ರದರ್ಶನವು, ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆಯ ನಿಷೇಧ) ಅಧಿನಿಯಮ, 2005 ಮತ್ತು ಭಾರತದ ರಾಷ್ಟ್ರ ಲಾಂಛನ (ಬಳಕೆಯ ನಿಯಂತ್ರಣ) ನಿಯಮಗಳು, 2007ರ ಉಲ್ಲಂಘನೆಯಾಗುತ್ತದೆ.

3. ವಿವಿಧ ಸರ್ಕಾರಿ ಉದ್ದೇಶಗಳಿಗಾಗಿ ಭಾರತದ ರಾಷ್ಟ್ರ ಲಾಂಛನವನ್ನು ಬಳಸಲು ಅಧಿಕಾರ ಹೊಂದಿರುವ ಸರ್ಕಾರಿ ಏಜೆನ್ಸಿಗಳು, ನಮೂನೆಯಲ್ಲಿ ಲಗತ್ತಿಸಿರುವ ಪ್ರಕಾರ ಸಿಂಹ ಮುಕುಟದ ಪಾರ್ಶ್ವ ಚಿತ್ರದ ಕೆಳಗೆ ದೇವನಾಗರಿ ಭಾಷೆಯಲ್ಲಿ ಬರೆದ "ಸತ್ಯಮೇವ ಜಯತೆ" ಧ್ಯೇಯ

ವಾಕ್ಯವಿರುವ ರಾಷ್ಟ್ರ ಲಾಂಛನದ ಪೂರ್ಣ ಚಿತ್ರವನ್ನು ಬಳಸಬೇಕು ಎಂಬುದನ್ನು ಪುನರುಚ್ಛರಿಸಲಾಗಿದೆ. ಈ ಸಂಬಂಧದಲ್ಲಿ ದಯವಿಟ್ಟು ಅಗತ್ಯ ಸೂಚನೆಗಳನ್ನು ತಮ್ಮ ಆಡಳಿತಾತ್ಮಕ ವ್ಯಾಪ್ತಿಯಲ್ಲಿ ಬರುವ ಇಲಾಖಾ ಮುಖ್ಯಸ್ಥರು/ ಸರ್ಕಾರಿ ಸಂಸ್ಥೆಗಳಿಗೆ ಮತ್ತೊಮ್ಮೆ ನೀಡಿ "ಸತ್ಯಮೇವ ಜಯತೆ" ಧ್ಯೇಯ ವಾಕ್ಯವನ್ನು ರಾಷ್ಟ್ರ ಲಾಂಛನದಿಂದ ಹೊರತುಪಡಿಸದಂತೆ ನೋಡಿಕೊಳ್ಳಬೇಕೆಂದು ಕೋರಿದೆ.

ವಿ. ಶಿವಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ರಾಜಕೀಯ).

APPENDIX I



Note : This design is in simplified form and meant for reproduction in small sizes, such as for use in Stationery, seals and die-printing.

APPENDIX II



Note : This design is more detailed and meant for reproduction in bigger sizes.

T.K. Viswanathan,
Secy. to the Govt. of India

ಪಿ.ಆರ್. 1048